ರಿಂದ,

ಆರ್. ಶೇಜೇಶ್ವರ
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ.

ಮುಖಾಂತರ,

1. ಸಂಶೋಧನಾ ಮಾರ್ಗದರ್ಶಕರು
ಪ್ರೊ. ಹನುಮ ನಾಯಕ
ನಿವೃತ್ತ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ.

2. ಅಧ್ಯಕ್ಷರು
ಇತಿಹಾಸ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ.

ಇವರಿಗೆ,

ಕುಲಸಚಿವರು (ಪರೀಕ್ಷಾಂಗ)
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

ಮಾನ್ಯರೇ,

ವಿಷಯ: ಪಿಎಚ್.ಡಿ ಪದವಿಗಾಗಿ ಅಂತಿಮ ಸಾರಲೇಖವನ್ನು ಸಲ್ಲಿಸುತ್ತಿರುವ ಕುರಿತು.

ಉಲ್ಲೇಖ: 1) NO, MU/EXB/ph.D/CR.31/Hist./2012-13: Date:13-12-2012
2) NO, MU/EXB/ph.D/CR.31/Hist./2012-13: Date:11-12-2012

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಆರ್. ಶೇಜೇಶ್ವರ ಆದ ನಾನು 2011–12ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಹನುಮನಾಯಕ ಇವರ ಮಾರ್ಗದರ್ಶನದಲ್ಲಿ **"ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಗೋಳ: ಒಂದು ಅಧ್ಯಯನ" (ಪೂರ್ವ ಇತಿಹಾಸ ಕಾಲದಿಂದ ಕ್ರಿ. ಶ. 18ನೇ ಶತಮಾನದವರೆಗೆ)** ಎಂಬ ವಿಷಯದ ಕುರಿತು, ಸಂಶೋಧನಾ ಅಧ್ಯಯನ ಮಾಡಲು ನೋಂದಣಿ ಮಾಡಿದ್ದು, ಇದಕ್ಕೆ ಸಂಬಂಧಿಸಿದಂತೆ ಅಂತಿಮ ಸಾರಲೇಖವನ್ನು ಸಿದ್ಧಪಡಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ಅಂತಿಮ ಸಾರಲೇಖದ 12 ಪ್ರತಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿದ್ದೇನೆ. ಇದನ್ನು ಸ್ವೀಕರಿಸಿ ಮುಂದಿನ ಕ್ರಮ ಕೈಗೊಳ್ಳುವಂತೆ ವಿನಂತಿಸಿಕೊಳ್ಳುತ್ತಿದ್ದೇನೆ.

ವಂದನೆಗಳೊಂದಿಗೆ,

ಸ್ಥಳ: ಮಂಗಳಗಂಗೋತ್ರಿ
ದಿನಾಂಕ: 23/11/2020 .

ಇತೀ ತಮ್ಮ ವಿಶ್ವಾಸಿ
Shejeswara, R.
(ಆರ್.ಶೇಜೇಶ್ವರ)

ಮಾರ್ಗದರ್ಶಕರು

ಅಧ್ಯಕ್ಷರು

Chairman
Department of Studies in History
Mangalore University
Mangalagangothri - 574 199
Karnataka, India

ಪಿಎಚ್.ಡಿ ಪದವಿಗಾಗಿ ಸಲ್ಲಿಸುವ ಸಂಶೋಧನಾ ಪ್ರಬಂಧದ ಅಂತಿಮ ಸಾರಲೇಖ

ಸಂಶೋಧನಾ ವಿಷಯ: "ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಸಾಂಸ್ಕೃತಿಕ ಹಾಗೂ ಭೂಗೋಳ: ಒಂದು ಅಧ್ಯಯನ"

(ಪೂರ್ವ ಇತಿಹಾಸ ಕಾಲದಿಂದ ಕ್ರಿ.ಶ. 18ನೇ ಶತಮಾನದವರೆಗೆ)

ಆರ್.ಶೇಜೇಶ್ವರ
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

ಮಾರ್ಗದರ್ಶಕರು
ಪ್ರೊ. ಹನುಮನಾಯಕ
ನಿವೃತ್ತ ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

ಇತಿಹಾಸ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ

ನವಂಬರ್–2020

“ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಗೋಳ: ಒಂದು ಅಧ್ಯಯನ”

(ಪೂರ್ವ ಇತಿಹಾಸ ಕಾಲದಿಂದ ಕ್ರಿ.ಶ. 18ನೇ ಶತಮಾನದವರೆಗೆ)

ಅಂತಿಮ ಸಾರಲೇಖ

ಪೀಠಿಕೆ:

ಚಿತ್ರದುರ್ಗ ಜಿಲ್ಲೆಯು ಕರ್ನಾಟಕ ಇತಿಹಾಸದಲ್ಲಿ ಪ್ರಮುಖ ಮತ್ತು ಮಹತ್ವದ ಸ್ಥಾನವನ್ನು ಹೊಂದಿದೆ. ಇತಿಹಾಸ ತಜ್ಞರಾದ ಬಿ.ಎಲ್.ರೈಸ್, ಎಂ.ಹೆಚ್.ಕೃಷ್ಣ ಮುಂತಾದವರು ಪ್ರಥಮ ಬಾರಿಗೆ ಈ ಜಿಲ್ಲೆಯಲ್ಲಿ ಇತಿಹಾಸ ಆರಂಭ ಕಾಲದ ಕುರುಹುಗಳಾದ ಶಾಸನಗಳು, ನಾಣ್ಯಗಳು ಮತ್ತು ಮಡಕೆಯ ಚೂರುಗಳನ್ನು ಕಂಡುಹಿಡಿದು ಕರ್ನಾಟಕದ ಪ್ರಾಚೀನತೆಯನ್ನು ಕ್ರಿ.ಪೂ. 3ನೇ ಶತಮಾನಕ್ಕೆ ಒಯ್ದಿದ್ದಾರೆ. ಈ ಜಿಲ್ಲೆಯ ಬ್ರಹ್ಮಗಿರಿ, ಸಿದ್ದಾಪುರ, ಜಟ್ಟಿಂಗ ರಾಮೇಶ್ವರಗಳಲ್ಲಿ ಮೌರ್ಯ ದೊರೆ ಅಶೋಕನ ಬ್ರಾಹ್ಮಿ ಲಿಪಿಯ ಲಘು ಬಂಡೆ ಶಾಸನಗಳು, ಚಂದ್ರವಳ್ಳಿಯಲ್ಲಿ ಶಾತವಾಹನರ ಕಾಲದ ಅವಶೇಷಗಳು ಹಾಗೂ ಕರ್ನಾಟಕದ ಪ್ರಥಮ ಸ್ಥಳೀಯ ವಂಶವಾದ ಕದಂಬರ ಮಯೂರವರ್ಮನ ಶಾಸನವು ಇಲ್ಲಿಯೇ ದೊರೆತಿದ್ದು, ಕರ್ನಾಟಕ ಚರಿತ್ರೆ ಮತ್ತು ಸಂಸ್ಕೃತಿಗೆ ಬುನಾದಿ ಹಾಕಲಾಗಿದೆ. ಈ ಹಿನ್ನೆಲೆಯಲ್ಲಿ ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳವನ್ನು ಅಧ್ಯಯನ ಮಾಡಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ಚರಿತ್ರೆಯು ಮಾನವನ ಗತವನ್ನು ವ್ಯವಸ್ಥಿತವಾಗಿ ಮತ್ತು ವೈಜ್ಞಾನಿಕವಾಗಿ ದಾಖಲಿಸುವ ಒಂದು ಶಿಸ್ತು. ಗತವನ್ನು ರಚಿಸುವಾಗ ಮಾನವನು ತಯಾರಿಸಿ, ಬಳಸಿ ಬಿಟ್ಟುಹೋದ ವಸ್ತುಗಳನ್ನು ಕಂಡುಹಿಡಿದು ಅವುಗಳನ್ನು ಆಕರಗಳನ್ನಾಗಿ ಬಳಸಿಕೊಳ್ಳಲಾಗುವುದು. ಈ ನಿಟ್ಟಿನಲ್ಲಿ ಮಾನವನ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗೆ ಭೌಗೋಳಿಕ ಹಿನ್ನೆಲೆಯು ಯಾವ ರೀತಿ ಕಾರಣವಾಯಿತು? ಒಂದು ನಿರ್ದಿಷ್ಟ ಭೂಪ್ರದೇಶವು ಕಾಲಾನುಗತಿಯಲ್ಲಿ ಹೇಗೆ ಮಾರ್ಪಾಟಾಯಿತು ಎಂಬುದನ್ನು ಪ್ರಸ್ತುತ ಪ್ರಂಬಂಧದಲ್ಲಿ ಚರ್ಚಿಸಲಾಗಿದೆ. ಇಲ್ಲಿ ಇತಿಹಾಸ ಹಾಗೂ ಸಾಂಸ್ಕೃತಿಕ ಅಧ್ಯಯನ, ಇತಿಹಾಸ ಹಾಗೂ ಭೂಗೋಳ ಅಧ್ಯಯನ ಈ ರೀತಿಯ ಅಂತರ್‌ಶಾಸ್ತ್ರೀಯ ಅಧ್ಯಯನವನ್ನು ಮಾಡಲಾಗಿದೆ. ಮಾನವನು ಒಂದು ಭೂಪ್ರದೇಶವನ್ನು ಯಾವ ರೀತಿ ಬಳಸಿಕೊಂಡು ತನ್ನ ಸಮುದಾಯದ ಚರಿತ್ರೆಯನ್ನು ಸೃಷ್ಟಿಸಿದ, ಮಾನವನ ಬೆಳವಣಿಗೆಗೆ ಸಹಕಾರಿಯಾದ ಅಂಶಗಳು ಯಾವವು? ಭೌಗೋಳಿಕ ಅಂಶಗಳಾದ ಬೆಟ್ಟಗುಡ್ಡ, ಹಳ್ಳಕೊಳ್ಳಗಳು, ನದಿ ಹಾಗೂ ನದಿಪಾತ್ರಗಳು, ಸಸ್ಯವರ್ಗ ಅಲ್ಲಿನ ವಾಯುಗುಣ, ಮಳೆಯ ಪ್ರಮಾಣ, ಹವಾಮಾನ, ಪ್ರಾಣಿವರ್ಗ ಮೊದಲಾದ ಅಂಶಗಳು ಶಿಲಾಯುಗ ಮಾನವನ ಉಗಮದಿಂದ ಹಿಡಿದು ಹದಿನೆಂಟನೆಯ ಶತಮಾನದವರೆಗೆ ಯಾವ ರೀತಿ ಸಹಕಾರಿಯಾದವು ಎಂಬ ಅಂಶಗಳನ್ನು ಚರ್ಚಿಸಲಾಗಿದೆ. ಪ್ರೊ.ಇ.ಜಿ.ಆರ್.ಟೈಲರ್‌ರವರ ಅಭಿಪ್ರಾಯದಂತೆ ಭೂಗೋಳಶಾಸ್ತ್ರಜ್ಞರ ಅಧ್ಯಯನಗಳು ಗತಕಾಲಕ್ಕೆ ಕೊಂಡೊಯ್ಯುತ್ತವೆ. ಗತಕಾಲದ ಅನುಭವದ ತಳಹದಿಯ ಮೇಲೆ ಭವಿಷ್ಯತ್ತನ್ನು ರೂಪಿಸುವ ಜ್ಞಾನವನ್ನು ರೂಪಿಸಿಕೊಳ್ಳುವುದಾದರೆ ಪ್ರಾಚೀನ ನಾಗರೀಕತೆ ಮತ್ತು ಸಂಸ್ಕೃತಿಗಳ ಉಗಮ ಮತ್ತು ಬೆಳವಣಿಗೆಯಲ್ಲಿ ಭೂಗೋಳದ ಪ್ರಭಾವ ಪ್ರಮುಖವಾಗಿದೆ. ಆದ್ದರಿಂದಲೇ 16ನೇ ಶತಮಾನದ ಬ್ರಿಟೀಷ್ ವಿದ್ವಾಂಸ ರಿಚರ್ಡ್ ಹಕ್ಲುಯತ್ “ಭೂಗೋಳ ಮತ್ತು ಕಾಲಗಣನೆಯೆಂಬುದು ಇತಿಹಾಸದ ಸೂರ್ಯ ಮತ್ತು ಚಂದ್ರ ಮಾತ್ರವಲ್ಲದೇ ಇತಿಹಾಸದ ಎಡ ಮತ್ತು ಬಲ ಕಣ್ಣುಗಳಿದ್ದಂತೆ” ಎಂದು ಹೇಳಿರುವುದು ಸೂಕ್ತವೆನಿಸುತ್ತದೆ.

ಅರ್ಥ ಮತ್ತು ವ್ಯಾಖ್ಯೆ:

ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಭೂಗೋಳ ಎಂಬ ವಿಷಯದ ಅಧ್ಯಯನ ಇತ್ತಿಚಿನ ದಿನಗಳಲ್ಲಿ ಹೊಸ ಅಧ್ಯಯನವಾಗಿ ಹೊರಹೊಮ್ಮುತ್ತಿದೆ. ಚಾರಿತ್ರಿಕ ಭೂಗೋಳವೆಂದರೆ 'ಒಂದು ನಿರ್ದಿಷ್ಟ ಪ್ರದೇಶ ಅಥವಾ ಸ್ಥಳವು ನಿಗದಿತ ಅವಧಿಯಲ್ಲಿ ಆಗಿರುವ ಬದಲಾವಣೆಯೇ ಚಾರಿತ್ರಿಕ ಭೂಗೋಳ ಎನ್ನಬಹುದು. ಗತಕಾಲದಲ್ಲಿ ಭೂಪ್ರದೇಶವೊಂದರಲ್ಲಿ ಉಂಟಾದ ಬೆಳವಣಿಗೆಗೆ ಸಂಬಂಧಿಸಿದ್ದಾಗಿದ್ದು ಇಲ್ಲಿ ಮಾನವನ ಸಾಂಸ್ಕೃತಿಕ ಅಂಶಗಳು ಯಾವ ರೀತಿಯಲ್ಲಿ ಹಂತಹಂತವಾಗಿ ಬೆಳವಣಿಗೆಯಾದವು, ಇದರ ವ್ಯಾಪ್ತಿ ಹಾಗೂ ವಿಶಾಲತೆ, ಇದರ ಗಡಿ, ನೈಸರ್ಗಿಕ ಸಂಪನ್ಮೂಲಗಳ ಹಂಚಿಕೆ, ಉತ್ಪಾದನೆ, ಮತ್ತು ಅವುಗಳ ಉಪಯೋಗ ಮೊದಲಾದವುಗಳು ಯಾವ ರೀತಿ ಅಭಿವೃದ್ಧಿ ಹೊಂದಿದವು ಎಂಬುದನ್ನು ಅರ್ಥಯಿಸಿ ಅಧ್ಯಯನಿಸುವುದಾಗಿದೆ. ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಭೂಗೋಳವನ್ನು ಜಗತ್ತಿನ ಹಲವಾರು ವಿದ್ವಾಂಸರು ತಮ್ಮದೇ ಆದಂತಹ ರೀತಿಯಲ್ಲಿ ಅರ್ಥೈಸಿದ್ದಾರೆ.

ಅಮೇರಿಕದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಗೋಳ ಶಾಸ್ತ್ರಜ್ಞರಾದ ಸಿ.ಟಿ. ಸ್ಮಿತ್ ರವರ ಪ್ರಕಾರ ಚಾರಿತ್ರಿಕ ಭೂಗೋಳವು "ಸಾಂಸ್ಕೃತಿಕ ಭೂಪ್ರದೇಶದ ವಿಕಾಸ, ಗತ ಭೂಗೋಳದ ಪುನರ್‌ರಚನೆ, ಕಾಲಾನುಗತಿಯಲ್ಲಿ ಭೌಗೋಳಿಕ ಬದಲಾವಣೆ" ಕುರಿತ ಅಧ್ಯಯನವಾಗಿದೆ ಎನ್ನುತ್ತಾರೆ. ಆಂಡ್ರಿವ್ ಕ್ಲಾರ್ಕ್‌ರವರು "ಗತ ಸನ್ನಿವೇಶ ಅಥವಾ ಅದರಲ್ಲಿನ ಬದಲಾವಣೆ ಎಂಬುದು ಭೂಗೋಳಕ್ಕೆ ಸಂಬಂಧಿಸಿದ ಸಂಗತಿಯಾಗಿದೆ" ಎಂದಿದ್ದಾರೆ. 1978 ರಲ್ಲಿ ಗ್ರೆಗೋರಿ ರವರು ಭೂಗೋಳ ಶಾಸ್ತ್ರಜ್ಞರು ಹೇಗೆ ಪ್ರಾದೇಶಿಕ ಸಮಾಜ ರಚಿಸಲ್ಪಟ್ಟಿತು? ಹೇಗೆ ಬೆಸೆಯಿತು? ಮತ್ತು ಹೇಗೆ ರೂಪಾಂತರಗೊಡಿತು ಎಂಬುದೇ "ಚಾರಿತ್ರಿಕ ಭೂಗೋಳ" ಎಂದಿದ್ದಾರೆ. ಇದಲ್ಲದೆ ಸಾಂಸ್ಕೃತಿಕ ಭೂಪ್ರದೇಶವು ಒಂದು ಪ್ರದೇಶದಲ್ಲಿ ಜನಸಮುದಾಯದಿಂದ ರೂಪುಗೊಳ್ಳುವಂತಹುದು. ಇಲ್ಲಿ ಸಂಸ್ಕೃತಿಯು ಮಧ್ಯವರ್ತಿಯಾಗಿದ್ದು, ಭೂಪ್ರದೇಶವು ಒಂದು ಮಾಧ್ಯಮವಾಗಿದೆ. ಇದನ್ನೇ ಸಾಂಸ್ಕೃತಿಕ ಭೂಪ್ರದೇಶವೆಂಬುದರ ಪರಿಣಾಮವೆನ್ನುತ್ತಾರೆ. ಚಾರಿತ್ರಿಕ ಭೂಗೋಳವು ಇತಿಹಾಸಕಾರ ಮತ್ತು ಭೂಗೋಳತಜ್ಞ ಇವರಿಗೆ ಸಂಬಂಧಿಸಿದ್ದು, ಈ ಎರಡು ವಿಭಾಗಗಳ ವಿದ್ವಾಂಸರು ಪ್ರತ್ಯೇಕವಾಗಿ ಅಧ್ಯಯನ ಮಾಡಿರುವುದನ್ನು ನೋಡಬಹುದಾಗಿದೆ.

ಕ್ರಿ.ಶ. 17ನೇ ಶತಮಾನದಲ್ಲಿ ಮೊದಲ ಬಾರಿಗೆ ಫಿಲಿಫ್ ಕ್ಲೂವರ್ ಪ್ರಕಟಿಸಿದ ಗ್ರಂಥ "ಹಿಸ್ಟಾರಿಕಲ್ ಜಿಯಾಗ್ರಫಿ ಆಫ್ ಜರ್ಮನಿ"ಯಲ್ಲಿ ಭೂಮಿಯ ಬಗೆಗಿನ ಜ್ಞಾನದೊಂದಿಗೆ ಅದರ ವಿಭಾಗೀಯತೆಯನ್ನು ಕಾಣಲು ಸಾಧ್ಯವಾಯಿತು. ಡೆರ್ವೆಂಟ್ ಎಸ್ ವೈಟ್ಲೆಸ್ಲಿ ಇವರು ಕ್ರಿ.ಶ. 1939ರಲ್ಲಿ "ಐತಿಹಾಸಿಕ ಭೌಗೋಳಿಕತೆ" ಎಂಬ ಪದವನ್ನು ಮೊದಲ ಬಾರಿಗೆ ಬಳಸಿದ ಕೀರ್ತಿಗೆ ಪಾತ್ರರಾಗುತ್ತಾರೆ. ಕ್ರಿ.ಶ. 1970ರ ದಶಕದಲ್ಲಿ ಕಾರ್ಲ್ ಬೆಕರ್ (1972), ಆರ್.ಜೆ. ಜಾನ್‌ಸ್ಟನ್ (1979) ಮೊದಲಾದವರು ಗತ ಅಧ್ಯಯನ, ಗತದ ಕಾಲಾಂತರದ ಬದಲಾವಣೆ ಕುರಿತು ಹೇಳಿದ್ದಾರೆ. ಸ್ಪೆನ್ಸರ್ ಮತ್ತು ಥಾಮಸ್ ರವರ ಪ್ರಕಾರ ಸಂಸ್ಕೃತಿ ಎಂಬುದು "ಒಂದು ಜನಸಮುದಾಯದಿಂದ ಹುಟ್ಟುವಂತಹುದು ಮತ್ತು ಕ್ರಮೇಣ ಬದಲಾವಣೆ ಕಾಣುವಂತಹುದು. ನಂತರ ತನ್ನದೇ ಆದ ಸಂಸ್ಕೃತಿ ಬೆಳವಣಿಗೆಗೆ ಕಾರಣವಾಗುತ್ತದೆ" ಎಂದಿದ್ದಾರೆ.

ಭೌಗೋಳಿಕ ಹಿನ್ನೆಲೆ:

ಚಾರಿತ್ರಿಕ ಭೂಗೋಳದ ಅಧ್ಯಯನದಲ್ಲಿ ಒಂದು ಪ್ರದೇಶದ ಭೌಗೋಳಿಕ ಅಂಶಗಳನ್ನು ತಿಳಿದುಕೊಳ್ಳುವುದು ಅತ್ಯವಶ್ಯಕ. ಚಿತ್ರದುರ್ಗ (ಅವಿಭಜಿತ) ಜಿಲ್ಲೆಯು ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿದ್ದು, ಉತ್ತರ ಅಕ್ಷಾಂಶ 13^0.15 ರಿಂದ 15^0.20 ಅಕ್ಷಾಂಶದವರೆಗೂ ಮತ್ತು ಪೂರ್ವ ರೇಖಾಂಶ 75^0.31 ರಿಂದ 77^0.20 ರವರೆಗೂ ವ್ಯಾಪಿಸಿದ್ದು, ಒಟ್ಟು 10.802.60 ಚದರ ಕಿಲೊಮೀಟರ್ ಭೂವಿಸ್ತೀರ್ಣ ಹೊಂದಿದೆ. ಉತ್ತರ–ದಕ್ಷಿಣದಲ್ಲಿ 88 ಮೈಲಿ, ಪೂರ್ವ–ಪಶ್ಚಿಮದಲ್ಲಿ 100 ಮೈಲಿ ಪ್ರದೇಶವನ್ನು ಹೊಂದಿದೆ. ಸಮುದ್ರ ಮಟ್ಟದಿಂದ ಸುಮಾರು 600 ಮೀಟರ್ ಎತ್ತರದಲ್ಲಿದ್ದು, ಈ ಜಿಲ್ಲೆಯ ಉತ್ತರಕ್ಕೆ ಬಳ್ಳಾರಿ ಜಿಲ್ಲೆ, ಪೂರ್ವ ದಿಕ್ಕಿನಲ್ಲಿ ಆಂಧ್ರಪ್ರದೇಶದ ಆನಂತಪುರ ಜಿಲ್ಲೆ, ಆಗ್ನೇಯದಲ್ಲಿ ತುಮಕೂರು ಜಿಲ್ಲೆ, ನೈಋತ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆ, ವಾಯುವ್ಯದಲ್ಲಿ ಹಾವೇರಿ ಜಿಲ್ಲೆ ಹಾಗೂ ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆಗಳನ್ನು ಗಡಿಭಾಗಗಳನ್ನಾಗಿ ಹೊಂದಿದೆ. ಚಿತ್ರದುರ್ಗ (ಅವಿಭಜಿತ) ಜಿಲ್ಲೆಯಲ್ಲಿ ಒಟ್ಟು ಒಂಬತ್ತು ತಾಲ್ಲೂಕುಗಳಿದ್ದು ಚಿತ್ರದುರ್ಗ, ದಾವಣಗೆರೆ, ಹರಿಹರ, ಜಗಳೂರು, ಹೊಸದುರ್ಗ, ಮೊಳಕಾಲ್ಮೂರು, ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆ ತಾಲ್ಲೂಕುಗಳಾಗಿವೆ. ಈ ಜಿಲ್ಲೆಯಲ್ಲಿ ಒಟ್ಟು 1481 ಗ್ರಾಮಗಳಿದ್ದು, ಇದರಲ್ಲಿ 231 ಗ್ರಾಮಗಳು ಜನವಸತಿಯಿಲ್ಲದ ಬೇಚಿರಾಕು ಗ್ರಾಮಗಳಿವೆ. ಈ ಗ್ರಾಮಗಳು ಶಿಲಾಯುಗ ಕಾಲದಿಂದ ಹದಿನೆಂಟನೇ ಶತಮಾನದವರೆಗೆ ಯಾವ ರೀತಿ ಬೆಳವಣಿಗೆಯಾದವು? ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ಭೌಗೋಳಿಕ ಹಿನ್ನೆಲೆಯಲ್ಲಿ ಇವು ಪಡೆದಂತಹ ಹೆಸರುಗಳು ಯಾವುವು?, ಯಾವ ರೀತಿ ಹೆಸರನ್ನು ಪಡೆದವು?, ಹೇಗೆ ಪಡೆದವು? ಇವು ಹೊಂದಿದ್ದ ಆಡಳಿತ ವಿಭಾಗಗಳು ಯಾವುವು? ಎಂಬುದನ್ನು ಈ ಪ್ರಂಬಂಧದಲ್ಲಿ ಚರ್ಚಿಸಲಾಗಿದೆ.

ಚಿತ್ರದುರ್ಗ ಜಿಲ್ಲೆಯ ಭೂಮಿಯು ಕಲ್ಲು ಮಿಶ್ರಿತ ಕೆಂಪು, ಲವಣಯುಕ್ತ ಕಪ್ಪು–ಕೆಂಪು ಮಣ್ಣು ಹಾಗೂ ಹೊಸದುರ್ಗದಲ್ಲಿ ವಿಶೇಷವಾಗಿ ಅಲ್ಲಲ್ಲಿ ನಾನಾ ಭಾಗಗಳಲ್ಲಿ ಸುಣ್ಣದ ಮಣ್ಣಿನಿಂದ ಕೂಡಿದೆ. ಒಟ್ಟಾರೆಯಾಗಿ ಇಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯನ್ನು ಕಾಣಬಹುದು. ಜಿಲ್ಲೆಯು ಮಳೆ ಕಡಿಮೆ ಬೀಳುವ ಪ್ರದೇಶವಾಗಿದ್ದು, ರಾಜ್ಯದಲ್ಲಿಯೇ ಚಳ್ಳಕೆರೆ ತಾಲ್ಲೂಕು ಅತೀ ಕಡಿಮೆ ಮಳೆ ಬೀಳುವ ಪ್ರದೇಶವಾಗಿದೆ. ಇಲ್ಲಿ ವಾರ್ಷಿಕ ಕೇವಲ 665 ಮಿ.ಮೀಗಳು ಮಳೆ ಬೀಳುತ್ತದೆ. ಇಡೀ ಜಿಲ್ಲೆ ಬಿಸಿಲಿನ ತಾಪಮಾನದಿಂದ ಕೂಡಿದ್ದು, ಚಳಿಗಾಲ ಹಿತಕರವಾಗಿರುತ್ತದೆ.

ಚಿತ್ರದುರ್ಗ ಜಿಲ್ಲೆಯ ಪ್ರಮುಖ ನದಿಯೆಂದರೆ ವೇದಾವತಿ ನದಿ. ಇದು ಚಿಕ್ಕಮಗಳೂರು ಜಿಲ್ಲೆಯ ಬಾಬಬುಡನ್ ಗಿರಿಯ ಪೂರ್ವಭಾಗದಲ್ಲಿ ಹುಟ್ಟುವ ವೇದ ಮತ್ತು ಆವತಿ ಎರಡೂ ನದಿಗಳು ಸೇರಿ ವೇದಾವತಿ ನದಿಯಾಗಿದೆ. ಈ ಎರಡು ನದಿಗಳು ಕಡೂರು ತಾಲ್ಲೂಕಿನ ತಂಗಡಿ ಬಳಿ ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸುತ್ತವೆ. ಈ ನದಿಗೆ ಹಗರಿ ನದಿ ಎಂದು ಸಹಾ ಕರೆಯುತ್ತಾರೆ. ಮತ್ತೋಡು ಹೊಸದುರ್ಗಗಳ ನಡುವೆ ಹರಿಯುವ ಈ ನದಿಯು ಬೆಟ್ಟಗುಡ್ಡಗಳ ನಡುವೆ ಹರಿದು ಮಾರಿಕಣಿವೆಯ ಮೂಲಕ ಭರಮಗಿರಿ ದುರ್ಗದ ದಕ್ಷಿಣ ಮತ್ತು ಹಿರಿಯೂರಿನ ಮೂಲಕ ಹರಿಯುತ್ತದೆ. ನಂತರ ಚಳ್ಳಕೆರೆ ತಾಲ್ಲೋಕಿನ ಘಟಪರ್ತಿಯಿಂದ ಎಂಟು ಕಿ.ಮೀ. ದೂರದಲ್ಲಿ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ. ಮೊಳಕಾಲ್ಮೂರು ತಾಲ್ಲೂಕಿನ ಮುಖ್ಯ ನದಿ ಜಿನಗನಹಳ್ಳ ಎಂಬ ತೊರೆ ಇದನ್ನು ಚಿನ್ನಹಗರಿ ನದಿ ಎಂತಲೂ ಸಹಾ ಕರೆಯುತ್ತಾರೆ. ಇದು ಚಿತ್ರದುರ್ಗ, ಜಗಳೂರು ತಾಲ್ಲೂಕುಗಳ ಮೂಲಕ ಮೊಳಕಾಲ್ಮೂರು ತಾಲ್ಲೂಕು ಹಾಗೂ ಬಳ್ಳಾರಿ ಜಿಲ್ಲೆಯ ಗಡಿಯಾಗಿ ಸ್ವಲ್ಪ ದೂರ ಹರಿದು ತಾಲ್ಲೂಕಿನ ಮಧ್ಯಭಾಗದಲ್ಲಿ ಈಶಾನ್ಯಭಿಮುಖಾವಾಗಿ ಹರಿದು ವೇದಾವತಿಯನ್ನು ಸೇರುತ್ತದೆ. ಇನ್ನೊಂದು ನದಿ

ಸ್ವರ್ಣಮುಖಿ. ಇದು ತುಮಕೂರು ಜಿಲ್ಲೆಯಲ್ಲಿ ಹುಟ್ಟಿ ಹಿರಿಯೂರು ತಾಲ್ಲೂಕಿನ ಇಕ್ಕನೂರಿನ ಬಳಿ ಚಿತ್ರದುರ್ಗ ಜಿಲ್ಲೆಯನ್ನು ಪ್ರವೇಶಿಸಿ ಸುಮಾರು ಹನ್ನೊಂದು ಕಿ.ಮೀ. ದೂರ ಹರಿದು ವೇದಾವತಿ ನದಿಯನ್ನು ಸೇರುತ್ತದೆ. ಹರಿಹರ ತಾಲ್ಲೂಕಿನ ಪಶ್ಚಿಮದಲ್ಲಿ ಹಾವೇರಿ ಮತ್ತು ಚಿತ್ರದುರ್ಗ ಜಿಲ್ಲೆಯ ಗಡಿಯಲ್ಲಿ ತುಂಗಭದ್ರಾ ನದಿ ಹರಿಯುತ್ತದೆ. ಹೊಳಲ್ಕೆರೆ ತಾಲ್ಲೂಕಿನ ಪಶ್ಚಿಮ ಬೆಟ್ಟದಲ್ಲಿ ಹುಟ್ಟುವ ಸ್ಯಾಗಲ ಹಳ್ಳ ದಾವಣಗೆರೆ ತಾಲ್ಲೂಕಿನ ಮೂಲಕ ಹರಿದು ತುಂಗಭದ್ರಾವನ್ನು ಹರಿಹರದ ಹತ್ತಿರ ಕೂಡಿಕೊಳ್ಳುತ್ತದೆ. ಈ ತುಂಗಭದ್ರಾ ನದಿಯು ಹರಿಹರ ತಾಲ್ಲೂಕಿನ ಪಶ್ಚಿಮದ ಗಡಿಯಾಗಿ ಹರಿಯುತ್ತದೆ. ಚಿತ್ರದುರ್ಗ ಜಿಲ್ಲೆಯು ಮಳೆಯಾಶ್ರಿತವಾದ ಭೂಪ್ರದೇಶವಾಗಿರುವುದರಿಂದ ಜಿಲ್ಲೆಯಾದ್ಯಂತ ಅಲ್ಲಲ್ಲಿ ಕೆರೆ ಬಾವಿಗಳನ್ನು ಆಶ್ರಯಿಸಿದ್ದಾರೆ. ಅತಿ ಹೆಚ್ಚು ಕೆರೆಗಳನ್ನು ಚಳ್ಳಕೆರೆ ತಾಲೂಕಿನಲ್ಲಿ ನೋಡಬಹುದಾಗಿದೆ. ಮಾನವ ಮತ್ತು ಅವನು ಸಾಕಿದ ಪ್ರಾಣಿ ಪಕ್ಷಿಗಳು ವಾಸಿಸುವುದಕ್ಕೆ ನೀರು ಪ್ರಮುಖವಾಗಿದ್ದು, ಇಂತಹ ನೀರಿನ ಸೆಲೆ ಈ ಜಿಲ್ಲೆಯಲ್ಲಿ ಇರುವುದರಿಂದ ಪೂರ್ವ ಇತಿಹಾಸ ಕಾಲದಿಂದ ಮಾನವನು ಇಲ್ಲಿ ವಾಸಿಸುತ್ತಾ ತನ್ನ ನೆಲೆಯನ್ನು ಕಟ್ಟಿಕೊಂಡು ಬಂದಿದ್ದನ್ನು ಇಲ್ಲಿ ಗುರುತಿಸಬಹುದು.

ಕೋಟೆಯನಾಡು ಎಂದೇ ಪ್ರಸಿದ್ಧವಾದ ಚಿತ್ರದುರ್ಗ ಜಿಲ್ಲೆಯ ಹೆಚ್ಚು ಭಾಗ ಕಣಶಿಲೆಯ ಬೋಳು ಬೆಟ್ಟಗಳಿಂದ ಕೂಡಿದೆ, ಅಲ್ಲಲ್ಲಿ ಕಣಿವೆಗಳಿಂದ ಕೂಡಿದ್ದು, ಇಲ್ಲಿಯ ಬೆಟ್ಟ ಸಾಲುಗಳು ದಕ್ಷಿಣ ಆಗ್ನೇಯದಿಂದ ಉತ್ತರ ವಾಯುವ್ಯದ ಕಡೆಗೆ ಒಂದೇ ಅಂತರದಲ್ಲಿ ಸಾಗುತ್ತವೆ. ಪೂರ್ವ ದಿಕ್ಕಿನ ಬೆಟ್ಟ ಸಾಲು ಹಿರಿಯೂರಿನ ಪಶ್ಚಿಮದಿಂದ ಚಿತ್ರದುರ್ಗದವರೆಗೂ ಹಬ್ಬಿ ನಂತರ ಸ್ವಲ್ಪ ದೂರ ಬಿಟ್ಟು ವಾಯುವ್ಯದಲ್ಲಿ ಕಣ್ಣುಕುಪ್ಪೆ ಎಂಬ ಬೆಟ್ಟದಲ್ಲಿ ಮುಂದುವರೆದು ಜಿಲ್ಲೆಯ ಗಡಿಯವರೆಗೂ ಸಾಗುತ್ತದೆ. ಹೊಳಲ್ಕೆರೆ ತಾಲ್ಲೂಕಿನ ದಕ್ಷಿಣದಿಂದ ಉತ್ತರಕ್ಕೆ ಅರಸನಘಟ್ಟದವರೆಗೆ ಬೆಟ್ಟ ಶ್ರೇಣಿಗಳಿದ್ದು, ಇದು ಪಶ್ಚಿಮಕ್ಕೆ ರಾಮಗಿರಿ ದುರ್ಗದವರೆಗೂ ಹಬ್ಬಿದೆ. ಪೂರ್ವಘಟ್ಟ ಶ್ರೇಣಿಗೆ ಸೇರಿದ ಪಶ್ಚಿಮ ಶ್ರೇಣಿ ಹೊಸದುರ್ಗದಿಂದ ದಾವಣಗೆರೆ ತಾಲ್ಲೂಕಿನ ಮಾಯಕೊಂಡದ ಮೂಲಕ ಅಣಜಿವರೆಗೂ ಹಬ್ಬಿದೆ. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಕಣಶಿಲೆಯ ಬೆಟ್ಟಗುಡ್ಡಗಳು ಕಂಡುಬರುತ್ತವೆ. ಚಿತ್ರದುರ್ಗ ತಾಲ್ಲೂಕಿನಲ್ಲಿ ಸಾಮಾನ್ಯವಾಗಿ ಒಂದೇ ಸಮನಾದ ಬೆಟ್ಟಗುಡ್ಡಗಳು ಕಂಡುಬರುತ್ತವೆ. ಚಿತ್ರದುರ್ಗ ತಾಲ್ಲೂಕಿನಲ್ಲಿ ಜೋಗಿಮಟ್ಟಿ ಬೆಟ್ಟ (3803 ಅಡಿ), ಭೈರನಕಲ್ಲು ಗುಡ್ಡ (3863 ಅಡಿ), ಈಚಲು ಗುಡ್ಡ (3804 ಅಡಿ), ಓಬಳೇದೇವರ ಗುಡ್ಡ (3700 ಅಡಿ), ಧವಳಪ್ಪನ ಗುಡ್ಡ (3285 ಅಡಿ). ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಜಟ್ಟಂಗಿ ರಾಮೇಶ್ವರಗುಡ್ಡ (3469 ಅಡಿ), ಗುಹೇಶ್ವರ ಅಥವಾ ಗೋಸರಪ್ಪ ಗುಡ್ಡ (3165 ಅಡಿ), ಬ್ರಹ್ಮಗಿರಿ ಬೆಟ್ಟ (2317 ಅಡಿ), ನುಂಕೆಮಲೆ (3022 ಅಡಿ), ಜೋಗಪ್ಪನ ಗುಡ್ಡ (2936ಅಡಿ), ಸಂತೆಗುಡ್ಡ (2273 ಅಡಿ), ಹೊಳಲ್ಕೆರೆ ತಾಲ್ಲೂಕಿನ ದೊಡ್ಡ ರಂಗಪ್ಪನ ಗುಡ್ಡ (3751 ಅಡಿ), ಹಿರೇಕಂದವಾಡಿ ಗುಡ್ಡ (2703 ಅಡಿ), ಬಡ್ಡೇರಗುಡ್ಡ (3138 ಅಡಿ), ರಾಮಗಿರಿ ಬೆಟ್ಟ, ಗುಂಡೇರಿಗಳ ಬೆಟ್ಟ, ಜಾನಕಲ್ಲು ಬೆಟ್ಟ (2454 ಅಡಿ), ದೇವರಗುಡ್ಡ, ಜಾನಕಲ್ಲಿನ ವಡ್ಡೇರಗುಡ್ಡ ಪ್ರಮುಖವಾದವುಗಳಾಗಿವೆ. ಹೊಸದುರ್ಗ ತಾಲ್ಲೂಕಿನಲ್ಲಿ ಹಾಲುರಾಮೇಶ್ವರ ಬೆಟ್ಟ (3875 ಅಡಿ), ಕೋಟೆಕಲ್‌ಗುಡ್ಡ (3322 ಅಡಿ), ನೀರ್‌ಗುಡ್ಡ (3172 ಅಡಿ), ತಿರುಮಲದೇವರಗುಡ್ಡ (3078 ಅಡಿ), ದೊಡ್ಡರಸಿಗುಡ್ಡ (3062 ಅಡಿ), ಹೊಸದುರ್ಗದ ಹಾಲುರಾಮೇಶ್ವರ ಜಿಲ್ಲೆಯಲ್ಲಿಯೇ ಎತ್ತರದ ಬೆಟ್ಟವಾಗಿದೆ. ಹಿರಿಯೂರು ತಾಲ್ಲೂಕಿನಲ್ಲಿ ಮಾರಿಕಣಿವೆ ಬೆಟ್ಟ (3675 ಅಡಿ), ವೇಣುಕಲ್ಲುಗುಡ್ಡ (2088 ಅಡಿ), ಹಿಂಡಸನಕಟ್ಟೆ ಹಾಗೂ ಉತ್ತರ ಬೆಟ್ಟಶ್ರೇಣಿ ಮುಖ್ಯವಾದವುಗಳು. ದಾವಣಗೆರೆ ತಾಲ್ಲೂಕಿನ ಬಾತಿಗುಡ್ಡ ಪ್ರಮುಖವಾದುದು. ಇಲ್ಲಿ ಮಳೆಯಾಶ್ರಿತ ಕೃಷಿ ವ್ಯವಸ್ಥೆಯಿದ್ದು, ಕಡಿಮೆ ಮಳೆಯಿರುವುದರಿಂದ ಕೆಲವು ಜಲಾಶಯಗಳನ್ನು ನಿರ್ಮಿಸಿ ವ್ಯವಸಾಯಕ್ಕೆ

ನೀರೋದಗಿಸಲಾಗಿದೆ. ಈ ರೀತಿಯ ಬೆಟ್ಟಗುಡ್ಡಗಳಿಂದ ಇಡೀ ಜಿಲ್ಲೆಯು ಆವೃತವಾಗಿರುವುದರಿಂದ ಈ ಜಿಲ್ಲೆಯಲ್ಲಿ ಪೂರ್ವ ಇತಿಹಾಸ ಕಾಲದಿಂದ ಮಾನವನು ವಾಸಿಸಲು ಯೋಗ್ಯವಾಗಿತ್ತು ಎನ್ನಬಹುದು.

ಖನಿಜ ಸಂಪತ್ತಿಗೆ ಜಿಲ್ಲೆಯು ಹೆಸರುವಾಸಿಯಾಗಿದ್ದು ವಿಶೇಷವಾದ ಭೂಶಿಲೆಗಳನ್ನು ಹೊಂದಿದೆ. ಚಿನ್ನವನ್ನು ಚಿತ್ರದುರ್ಗ ತಾಲ್ಲೂಕಿನಲ್ಲಿ ಕೋಟೆಮರಡಿ, ಗೋಣೂರು, ಗುಡ್ಡದರಂಗವನಹಳ್ಳಿ, ಹೊಸದುರ್ಗ ತಾಲ್ಲೂಕಿನ ಬೂದಿಮರಡಿ, ಹಿರಿಯೂರು ತಾಲ್ಲೂಕಿನ ಜವನಗೊಂಡನಹಳ್ಳಿ, ಅನೆಸಿದ್ರಿ, ದಿಂಡಿವಾರ, ದಾವಣಗೆರೆ ತಾಲ್ಲೂಕಿನ ಹಳೆಕಲ್ಲು, ಜಗಳೂರು ತಾಲ್ಲೂಕಿನ ಹೊನ್ನೆಮರಡಿ ಚಿನ್ನ ನಿಕ್ಷೇಪವಿರುವ ಪ್ರದೇಶಗಳಾಗಿವೆ. ಜಿಲ್ಲೆಯ ಧಾರವಾಡ ಪದರ ಶಿಲಾಹರ ಪ್ರದೇಶಗಳಲ್ಲಿ ಮ್ಯಾಂಗನೀಸ್ ನಿಕ್ಷೇಪಗಳಿವೆ. ಚಿತ್ರದುರ್ಗದಲ್ಲಿ ಸಿಗುವ ಮ್ಯಾಂಗನೀಸ್ ಅದಿರು ಕಬ್ಬಿಣದಿಂದ ಮಿಶ್ರಣಗೊಂಡಿದ್ದು ಕೆಳದರ್ಜೆಯ ಅದಿರಾಗಿದೆ. ಹೊಳಲ್ಕೆರೆ ತಾಲ್ಲೂಕಿನಲ್ಲಿ ಮ್ಯಾಂಗನೀಸ್ ಗಣಿ, ಕಬ್ಬಿಣದ ಅದಿರು, ಹಿರಿಯೂರು ತಾಲ್ಲೂಕಿನಲ್ಲಿ ಕಬ್ಬಿಣದ ಅದಿರು, ಹೊಸದುರ್ಗ ತಾಲ್ಲೂಕಿನಲ್ಲಿ ಮ್ಯಾಂಗನೀಸ್ ಹಾಗೂ ಕಬ್ಬಿಣದ ಅದಿರು ಕಂಡುಬರುತ್ತದೆ. ಇಲ್ಲಿ ಸಲ್ಫೈಡ್ ಲೋಹಗಳು ವಿಶೇಷವಾಗಿ ಕಂಡುಬರುತ್ತದೆ. ಇದರಲ್ಲಿ ತಾಮ್ರ, ಸೀಸ, ತವರ, ಸತು, ಆರ್ಸೆನಿಕ್ ಅಂಟಿಮನಿ ಲೋಹಗಳು ಕಂಡುಬರುತ್ತವೆ. ಜಿಲ್ಲೆಯು ಭಾರತದಲ್ಲಿಯೇ ತಾಮ್ರದ ನಿಕ್ಷೇಪಕ್ಕೆ ಪ್ರಸಿದ್ಧಿಯನ್ನು ಪಡೆದಿದೆ. ಇಂಗಳದಾಳುನಲ್ಲಿ ಕಡಿದಾದ ಬೆಟ್ಟ ಸಾಲುಗಳಿದ್ದು, ಈ ಬೆಟ್ಟ ಸಾಲಿನ ನಡುವೆ 1007 ಮೀ ಎತ್ತರದ ಬೆಳ್ಳಿಬೆಟ್ಟ ಇದ್ದು, ಹಿಂದೆ ಇಲ್ಲಿ ತಾಮ್ರದ ಅದಿರನ್ನು ಸಂಸ್ಕರಿಸಿ ಇಂಗಳದಂತೆ (ಕೆಂಡ) ಸ್ವಚ್ಛ ತಾಮ್ರವನ್ನು ಉತ್ಪಾದಿಸುತ್ತಿದ್ದುದ್ದರಿಂದ ಈ ಪ್ರದೇಶಕ್ಕೆ ಇಂಗಳದಾಳು ಎಂಬ ಹೆಸರು ಬಂದಿರಬಹುದು. ತಾಮ್ರದ ಅದಿರಿನ ಸಿರವು ಸುಮಾರು 600 ಅಡಿಗಳ ಉದ್ದವಿದೆ. ಬೆಳ್ಳಿಗುಡ್ಡದ ಸಾಲಿನ ಪಶ್ಚಿಮ ತಪ್ಪಲಿನ ಭೂಗರ್ಭದಲ್ಲಿ ಸುಮಾರು 30 ಕಿ.ಮೀ. ದೂರ ಅಂಟಿಮನಿ, ಅರ್ಸೆನಿಕ್, ಸೀಸ ಹಾಗೂ ತಾಮ್ರದ ಅದಿರಿಗಳು ಕಂಡುಬರುತ್ತವೆ. ದಾವಣಗೆರೆಯಿಂದ 16 ಕಿ.ಮೀ. ದೂರದಲ್ಲಿರುವ ಕೈದಾಳದ ಹತ್ತಿರ ಬೆಣಚುಸಿರ ಒಂದರಲ್ಲಿ ಮ್ಯಾಲಕೈಟ್ ಖನಿಜವು (ತಾಮ್ರದ ಹಸಿರು ಅದಿರು) ಸೂಜಿಯಾಕಾರದಲ್ಲಿ ಸಿಗುತ್ತದೆ. ಚಿತ್ರದುರ್ಗ ತಾಲ್ಲೂಕಿನ ಗುಡ್ಡದ ರಂಗವ್ವನಹಳ್ಳಿ ಕುರುಬರ ಮರಡಿಕೆರೆ ಮಧ್ಯೆ ಇರುವ ಸ್ಥಳಗಳಲ್ಲಿ ಹಿರಿಯೂರು ತಾಲ್ಲೂಕಿನ ನಿಶಾನಿ ಗುಡ್ಡದ ಬಳಿಯಲ್ಲಿಯು ಸೀಸದ ಸಲ್ಫೈಡ್ ಅದಿರು ಸಿಗುತ್ತದೆ. ಗುಡ್ಡದ ರಂಗವ್ವನ ಹಳ್ಳಿಯಿಂದ ಮುಂದೆ ಉತ್ತರಕ್ಕೆ ಆಂಟಿಮನಿ ಅದಿರು ಇರುವುದು ಕಂಡುಬಂದಿದೆ. ಸೀಸ ಪ್ರಕೃತಿಯಲ್ಲಿ ಶುದ್ಧ ರೂಪದಲ್ಲಿ ದೊರೆಯುವುದಿಲ್ಲ. ಚಿತ್ರದುರ್ಗ ತಾಲ್ಲೂಕಿನ ಚಿಕ್ಕಣ್ಣನಹಳ್ಳಿಯಲ್ಲಿ ಅಂಟಿಮೊನಿ ಸಿಗುತ್ತದೆ. ಅಂಫಿಬೋಲ್ ವರ್ಗಕ್ಕೆ ಸೇರಿದ ಕಲ್ನಾರು ದಾವಣಗೆರೆ ತಾಲ್ಲೂಕಿನ ಮಾಯಾಕೊಂಡ, ಹೊಸದುರ್ಗ ತಾಲ್ಲೂಕಿನ ಬೂದಿಹಾಳು, ಗಂಜಿಕೆರೆ, ಹಿರಿಯೂರು ತಾಲ್ಲೂಕಿನ ಗೋಗುಡ್ಡ ಇಲ್ಲಿ ಹೆಚ್ಚು ಪ್ರಮಾಣದಲ್ಲಿ ದೊರೆಯುತ್ತದೆ. ಮಣ್ಣಿನ ಮೇಲ್ಭಾಗದಲ್ಲಿ ಉರುಳೆಯಾಕಾರದ ಹರಳುಗಳ ರೂಪದ ಪಾಟಲವರ್ಣದ ಕುರಂದ (ಕುರಂಡಂ) ಶಿಲೆ ಚಳ್ಳಕೆರೆ ತಾಲ್ಲೂಕಿನ ಉಲ್ಲವರ್ತಿ ಕಾವಲ್‌ನಲ್ಲಿ ದೊರೆಯುತ್ತದೆ. ಹೊಳಲ್ಕೆರೆ ತಾಲ್ಲೂಕಿನ ಶಿವಗಂಗೆಯ ಬಳಿ ಬಾಕ್ಸೈಡ್ ಅದಿರು ದೊರೆಯುತ್ತದೆ. ಇಲ್ಲಿ ಸಿಲಿಕ ಹೆಚ್ಚು ದೊರೆಯುತ್ತಿದ್ದು ಅಲ್ಯುಮಿನಿಯಂ ಕಡಿಮೆಯಿರುತ್ತದೆ. ಇದೇ ತಾಲ್ಲೂಕಿನ ಕುಡಿನೀರು ಕಟ್ಟೆಯ ಬಳಿ ಹರಳುಗಳ ಕಯನೈಟ್ ನಿಕ್ಷೇಪ ಕಂಡುಬರುತ್ತದೆ. ಇದನ್ನು ಅಗ್ನಿ ನಿರೋಧಕ ಇಟ್ಟಿಗೆ ತಯಾರಿಕೆ, ಗಾಜು ಕರಗಿಸುವ ಕುಲುಮೆ, ಮಡಿಕೆ ತಯಾರಿಕೆ, ಉಕ್ಕು ತಯಾರಿಕೆ, ವಿದ್ಯುತ್ ಕುಲುಮೆಯಲ್ಲಿ ಕಯನೈಟ್ ಇಟ್ಟಿಗೆಗಳ ಬಳಕೆಯಲ್ಲಿ ಕಂಡುಬರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಐದು ಕೋಟಿ ಟನ್ ಸುಣ್ಣದ ಕಲ್ಲಿದೆ ಎಂದು ಅಂದಾಜಿಸಲಾಗಿದೆ. ಚಿತ್ರದುರ್ಗದ ಪದರಶಿಲಾ ಹರವಿನಲ್ಲಿ ಅದರ ಪಶ್ಚಿಮ ಗಡಿಯಲ್ಲಿ ಸುಮಾರು 80 ಕಿ.

ಮೀ. ಉದ್ದದವರೆಗೆ ಸುಣ್ಣದ ಶಿಲೆಯ ಸ್ತರಗಳಿವೆ. ಹೊಳಲ್ಕೆರೆ ಸಮೀಪದ ಶಿವಗಂಗೆಯ ಸಮೀಪದಲ್ಲಿ ದೊರೆಯುತ್ತದೆ. ಹೊಸದುರ್ಗ ತಾಲ್ಲೂಕಿನ ಮಡದಕೆರೆ ಮತ್ತು ವಾಣಿವಿಲಾಸ ಸಾಗರ ಪ್ರದೇಶಗಳ ಸಮೀಪದ ನಿಕ್ಷೇಪಗಳಲ್ಲಿ ಅಧಿಕ ಕ್ಯಾಲ್ಸಿಯಂ ಇರುವ ಸುಣ್ಣಕಲ್ಲು ದೊರೆಯುತ್ತದೆ. ಸ್ಪಟಿಕ ಕಲ್ಲಿನ ಪದರಗಳು, ಹಿರಿಯೂರು ತಾಲ್ಲೂಕಿನ ಜವಗೊಂಡನಹಳ್ಳಿ, ಜಗಳೂರು ತಾಲ್ಲೂಕಿನ ಹೊಸಕೆರೆ ಬಳಿಯ ಬೆಟ್ಟ, ಹೊಸದುರ್ಗ ತಾಲ್ಲೂಕಿನ ಮಾರಿಕಣಿವೆ ಮತ್ತು ಮಡದಕೆರೆ, ಕಂಚಿಪುರ ಭಾಗಗಳು, ಹೊಳಲ್ಕೆರೆ ತಾಲ್ಲೂಕಿನ ಹೊಸಕೆರೆ, ದೇವರಪುರ, ದಾವಣಗೆರೆ ತಾಲ್ಲೂಕಿನ ಬೆಳ್ಳಿಕೆರೆ ಮೊದಲಾದವು. ಹೊಳಲ್ಕೆರೆ ತಾಲ್ಲೂಕಿನ ಲೋಕದೊಳುವಿನ ಸಮೀಪ ಬಳಪದ ಕಲ್ಲು ದೊರೆಯುತ್ತವೆ. ಹೊಳಲ್ಕೆರೆ ಹಾಗೂ ಹೊಸದುರ್ಗ ತಾಲ್ಲೂಕುಗಳ ಕೆಲವು ಪ್ರದೇಶಗಳಲ್ಲಿ ಸುಣ್ಣಶಿಲೆಗಳೊಂದಿಗೆ ಮಾಸಲು ಬಣ್ಣಗಳ ಕಾವಿಮಣ್ಣು, ಮಂಕು ಹಸಿರು, ಕಂದು, ಹಳದಿ ಮೊದಲಾದ ಬಣ್ಣಗಳಲ್ಲಿ ಸಿಗುತ್ತದೆ. ಹೊಳಲ್ಕೆರೆ ತಾಲ್ಲೂಕಿನ ಅಮೃತಾಪುರ ಮತ್ತು ಚಿಕ್ಕಜಾಜುರ ಬಳಿ ಕಾವಿ ಮಣ್ಣಿನಿಂದ ಬೇರೆಯಾದ ಹಾಗೂ ಕೆಲವು ಪ್ರದೇಶಗಳಲ್ಲಿ ಅದರೊಡನೆಯೇ ಸಿಗುವ ಜಿಗುಟಾದ ಬಣ್ಣದ ಜೇಡಿ ಮಣ್ಣು ಸಿಗುತ್ತದೆ. ಈ ಮಣ್ಣನ್ನು ಮನೆಗಳಿಗೆ ಬಣ್ಣ ಬಳಿಯಲು ಉಪಯೋಗಿಸುತ್ತಾರೆ. ಚಿತ್ರದುರ್ಗ ತಾಲ್ಲೂಕಿನ ಕೊಳಹಾಳ ಹಾಗೂ ಕಡ್ಲೆಗುದ್ದುಗಳಲ್ಲಿ ಗಂಧಕದ ಗಣಿಗಳಿವೆ. ಈ ನಿಟ್ಟಿನಲ್ಲಿ ಚಿತ್ರದುರ್ಗವು ಖನಿಜಗಳಿಂದ ಕೂಡಿದ ಕಣಜವಾಗಿದ್ದು, ಭೌಗೋಳಿಕ ಹಿನ್ನೆಲೆಯಲ್ಲಿ ಸಂಪದ್ಭರಿತ ಜಿಲ್ಲೆಯಾಗಿದ್ದು, ಉತ್ತರ ಭಾರತದ ಅಶೋಕನು ಇಲ್ಲಿ ಸಾಮ್ರಾಜ್ಯ ವಿಸ್ತರಿಸಲು ಹಾಗೂ ಈ ಸಂಪತ್ತಿನ ಮೇಲೆ ತನ್ನ ಹಿಡಿತ ಸಾಧಿಸಲು ಸಹಕಾರಿಯಾಯಿತು ಎನ್ನಬಹುದು. ಈ ಖನಿಜ ನಿಕ್ಷೇಪವಿರುವ ಸ್ಥಳಗಳಲ್ಲಿ ಪೂರ್ವೇತಿಹಾಸ ಕಾಲದಿಂದಲೂ ಮಾನವನು ಬದುಕು ಕಟ್ಟಿಕೊಂಡಿರುವುದು ಗಮನಾರ್ಹವಾಗಿದೆ. ಇಂದಿಗೂ ಚಿತ್ರದುರ್ಗ ತಾಲ್ಲೂಕಿನ ಇಂಗಳದಾಳಿನಲ್ಲಿ ತಾಮ್ರದ ಅದಿರನ್ನು ತೆಗೆದು ಸಂಸ್ಕರಿಸುತ್ತಿದ್ದಾರೆ. ಕಂಬಳಿ ನೇಯ್ಗೆ ಇಂದೂ ದಾವಣಗೆರೆ ತಾಲ್ಲೂಕಿನಲ್ಲಿ ಮಾಡುತಿದ್ದಾರೆ. ರೇಷ್ಮೆ ಸೀರೆಯನ್ನು ಮೊಳಕಾಲ್ಮೂರಿನಲ್ಲಿ ಹೆಣೆಯುತ್ತಾರೆ. ಮತ್ತೋಡು ಗ್ರಾಮವು ಪುರಾತನ ಕಾಲದಿಂದಲೂ ಗಾಜಿನ ಬಳೆ ತಯಾರಿಕೆಗೆ ಪ್ರಸಿದ್ಧವಾಗಿದೆ ಎನ್ನಬಹುದು.

ಪೌರಾಣಿಕವಾಗಿ ಜಿಲ್ಲೆಯು ರಾಮಾಯಣ ಮತ್ತು ಮಹಾಭಾರತ ಕಥೆಗಳನ್ನು ಸಾರುವ ಹಾಗೂ ಈ ಘಟನೆಗಳನ್ನು ತಿಳಿಸುವ ನೆಲೆಗಳನ್ನು ಹೊಂದಿದ್ದು, ಇಂದಿಗೂ ಇವು ಜನರ ಆಡು ಭಾಷೆಯಲ್ಲಿ ಬರುವಂತಹ ನೆಲೆಗಳಾಗಿವೆ. ಚಿತ್ರದುರ್ಗವು ದ್ವಾಪರ ಯುಗದಲ್ಲಿ ಹಿಡಿಂಬಾಸುರನೆಂಬ ರಾಕ್ಷಸ ಆಳುತ್ತಿದ್ದನೆಂದು, ಇವನಿಗೆ ಹಿಡಿಂಬಿ ಎಂಬ ತಂಗಿಯಿದ್ದಳು. ಪಾಂಡವರ ಭೀಮನ ರೂಪಕ್ಕೆ ಹಿಡಿಂಬೆಯು ಮರುಳಾಗಿ ನಿಂತಳು. ನಂತರ ಯುದ್ಧವಾಗಿ ಹಿಡಿಂಬಾಸುರನು ಭೀಮನಿಂದ ಸೋತು ಮರಣಿಸಿದಾಗ ಅವನಿಗಾಗಿ ಹಿಡಿಂಬೇಶ್ವರ ದೇವಾಲಯ ನಿರ್ಮಾಣವಾಯಿತು ಎಂದು ತಿಳಿದುಬರುತ್ತದೆ. ಹೊಸದುರ್ಗ ತಾಲ್ಲೂಕಿನ ದೊಡ್ಡವಜ್ರವು ದಶರಥ ರಾಜನು ತನ್ನ ಬಾಣದಿಂದ ಶ್ರವಣಕುಮಾರನಿಗೆ ಬಾಣ ಹೊಡೆದ ಸ್ಥಳವೆಂದು, ಪ್ರಾಗೈತಿಹಾಸದ ನೆಲೆಗಳಾದ ಶಿಲಾಗೋರಿಗಳನ್ನು ಪಾಂಡವರ ಸಮಾಧಿಗಳೆಂದು ಪುರಾಣಕ್ಕೆ ಸಂಬಂಧಿಸಿದ ವಾಸದ ತಾಣಗಳೆಂದು ತಿಳಿಯಬಹುದು. ಆದರೆ ಈ ಪುರಾಣಕ್ಕೆ ಸಂಬಂದಿಸಿದ ನೆಲೆಗಳೆಲ್ಲವೂ ಐತಿಹಾಸಿಕ ಹಾಗೂ ಪ್ರಾಗೈತಿಹಾಸಿಕ ನೆಲೆಗಳಾಗಿವೆ. ಪ್ರಂಪಚದಲ್ಲಿ ಯಾವುದೇ ನಾಗರಿಕತೆ ಆರಂಭವಾಗುವುದು ಶಿಲಾಯುಗ ಸಂಸ್ಕೃತಿಯಿಂದ. ಇದೇ ರೀತಿ ಚಿತ್ರದುರ್ಗ ಜಿಲ್ಲೆಯಲ್ಲಿ ಮೊದಲ ಬಾರಿ 1863ರಲ್ಲಿ ರಾಬರ್ಟ್ ಬ್ರೂಸ್‌ಫುಟ್‌ರವರು ಹಳೆ ಶಿಲಾಯುಗದ ಆಯುಧಗಳನ್ನು ತಾಳ್ಯದಲ್ಲಿ ಪತ್ತೆಹಚ್ಚಿದರು. ಜಾನಕಲ್ಲು, ಕೂನಬೇವು ಹಾಗೂ ಯಾದಲಗಟ್ಟಿಯಲ್ಲಿ ಸೂಕ್ಷ್ಮಶಿಲಾಯುಗದ ಆಯುಧಗಳನ್ನು ಬ್ರಹ್ಮಗಿರಿ, ನುಂಕಮಲೆ, ಹಾನಗಲ್ಲು, ದೊಡ್ಡೇರಿ, ಮಹದೇವಪುರ, ಪುರ್ಲಹಳ್ಳಿ,

ಯಾದಲಗಟ್ಟಿ, ಜಾನಕಲ್ಲು ಹರಳಯ್ಯನಗುಡಿ, ಕೊಂಡಜ್ಜಿ ಹಾಗೂ ಬೊಮ್ಮನಕುಂಟೆ ಮೊದಲಾದ ಕಡೆಗಳಲ್ಲಿ ನೂತನ ಶಿಲಾಯುಗದ ನೆಲೆಗಳನ್ನು, ಬ್ರಹ್ಮಗಿರಿ, ಜಟ್ಟಿಂಗರಾಮೇಶ್ವರ, ಚಿಕ್ಕಮಲ್ಲನ ಹೊಳೆ, ಹರಿಹರ, ನುಂಕಮಲೆ, ಹಳಸಬಾಳು, ಮರಡಿಹಳ್ಳಿ, ನೆರೆನಾಳು, ಐಮಂಗಲ, ಎಂ.ಕೋಟೆ, ಬಸಪ್ಪನ ಮಾಳಿಗೆ, ಹಳೆದೊಡ್ಡೆರಿ, ಮಳಪ್ಪನಗುಡ್ಡ, ಮಹದೇವಪುರ, ಹರ್ತಿಕೋಟೆ, ದೊಡ್ಡಬಾತಿ, ರಾಮಗಿರಿ, ಸೋಮೇರಹಳ್ಳಿ, ಗರಗ, ತಣಿಕೆಕಲ್ಲು, ಕಿಟ್ಟದಾಳು, ಬಸ್ತಿಹಳ್ಳಿ, ಕೂನಬೇವು, ಕುರುಮರಡಿಕೆರೆ, ಪಾಲವ್ವನಹಳ್ಳಿ, ಹಳಸಬಾಳು, ಚಂದ್ರವಳ್ಳಿ ಮೊದಲಾದ ವಸತಿ ನೆಲೆಗಳು. ಕ್ರಿ.ಪೂ. 1700 ರಿಂದ ಕ್ರಿ.ಪೂ. 1000 ದವರೆಗೆ ತಾಮ್ರ ಲೋಹದ ಬ್ರಹ್ಮಗಿರಿ, ಚಂದ್ರವಳ್ಳಿ, ಜಟ್ಟಿಂಗ ರಾಮೇಶ್ವರ, ಚಿತ್ರದುರ್ಗ, ಇಂಗಳದಾಳು, ಅಜ್ಜಿಗುಡ್ಡಕಾವಲು, ವಡೇರಹಳ್ಳಿ, ಸಂತೆಗುಡ್ಡ, ಗೌರಿಪುರ, ಗಂಜಿಗುಂಟೆ, ಕಾಲುವೆಹಳ್ಳಿ ಹಾಗೂ ದೊಡ್ಡೆರಿ ಮೊದಲಾದ ನೆಲೆಗಳು, ಬೃಹತ್ ಶಿಲಾಯುಗದ ಬ್ರಹ್ಮಗಿರಿ, ಚಂದ್ರವಳ್ಳಿ, ಚಿಪ್ಪಿನಕೆರೆ, ನುಂಕೆಮಲೆ, ಹಳಕೆರೆ, ಹಾನಗಲ್ಲು, ಅಣಜಿ, ದೊಡ್ಡೆರಿ, ಮಳಪ್ಪನಗುಡ್ಡ, ಮಹದೇವಪುರ, ಪುರ್ಲಹಳ್ಳಿ, ಕೂನಬೇವು, ಬೆಳಗಟ್ಟೆ, ನರೇನಹಾಳು, ದೊಡ್ಡಬಾತಿ, ರಾಮಗಿರಿ, ಸೂಜಿಗಲ್ಲು, ದೊಡ್ಡಘಟ್ಟ, ಮಲ್ಲಾಪುರ ಮೊದಲಾದ ನೆಲೆಗಳು, ಚಂದ್ರವಳ್ಳಿ, ಕೊಮಾರನಹಳ್ಳಿ ಹಾಗೂ ಬ್ರಹ್ಮಗಿರಿ (ಜಟ್ಟಿಂಗರಾಮೇಶ್ವರ) ಉತ್ಖನನದಲ್ಲಿ ಚಿಪ್ಪಿನಕೆರೆ, ಹಾನಗಲ್ಲು, ಪಾಲವ್ವನಹಳ್ಳಿ, ಗೌರಿಪುರ, ತಮಟಕಲ್ಲು, ಸಂಗೇನಹಳ್ಳಿ, ದೊಡ್ಡೆರಿ, ಉಳ್ಳಾರ್ತಿ, ನಾಗಗೊಂಡನಹಳ್ಳಿ, ಹಳೆಕಲ್ಲಹಳ್ಳಿ, ಶಿಡ್ಲಯ್ಯನಕೋಟೆ, ಕಿಟ್ಟದಾಳು, ಚಿಕ್ಕಮಧುರೆ, ಹರಿಹರ ಮೊದಲಾದ ನೆಲೆಗಳು. ಆರಂಭಿಕ ಇತಿಹಾಸ ಕಾಲದಿಂದ ಕ್ರಿ.ಶ. 10ನೇ ಶತಮಾನದವರೆಗಿನ ನಂದರು, ಮೌರ್ಯರು, ಶಾತವಾಹನರು, ಚುಟುಗಳು, ಮಹಾರಥಿಯರು, ಕದಂಬರು, ಬಾದಾಮಿ ಚಾಲುಕ್ಯರು, ಗಂಗರು, ರಾಷ್ಟ್ರಕೂಟರ ನೆಲೆಗಳು. ಕ್ರಿ.ಶ. 11ನೇ ಶತಮಾನದಿಂದ ಕ್ರಿ.ಶ. 14ನೇ ಶತಮಾನದವರೆಗೆ ಕಲ್ಯಾಣದ ಚಾಲುಕ್ಯರು, ನೊಳಂಬರು, ಸೇವುಣರು ಹಾಗೂ ಹೊಯ್ಸಳರ ಕಾಲದ ನೆಲೆಗಳು. ಕ್ರಿ.ಶ. 14ನೇ ಶತಮಾನದಿಂದ ವಿಜಯನಗರ ಅರಸರ ಕಾಲದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಭೂಗೋಳದ ನೆಲೆಗಳು. ಕ್ರಿ.ಶ. 16ನೇ ಶತಮಾನದಿಂದ ಪಾಳೆಯಗಾರರ ಆಡಳಿತಾವಧಿಯಲ್ಲಿನ ಚಾರಿತ್ರಿಕ ಸಾಂಸ್ಕೃತಿಕ ಭೂಗೋಳವನ್ನು ಐತಿಹಾಸಿಕ ಘಟನೆಗಳನ್ನು ಆಧರಿಸಿ ಇಲ್ಲಿ ಆಳಿದ ಅನೇಕ ರಾಜಮನೆತನಗಳ ಅಳ್ವಿಕೆಯಿಂದ ಚಾರಿತ್ರಿಕ ಅಂಶಗಳನ್ನು ತಿಳಿಯಬಹುದಾಗಿದೆ. ಹೀಗೆ ಈ ಮೇಲಿನ ರಾಜಮನೆತನಗಳು ಅಳ್ವಿಕೆ ನಡೆಸುವಾಗ ಇವರಿಗೆ ಇಲ್ಲಿನ ಭೌಗೋಳಿಕ ಅಂಶಗಳು ಯಾವ ರೀತಿ ನೆರವಾದವು? ಇವುಗಳ ಪಾತ್ರ ಏನು?, ಇವುಗಳು ಅವರ ಸಾಂಸ್ಕೃತಿಕ ಪರಂಪರೆಗೆ ಯಾವ ರೀತಿ ಕಾರಣವಾದವು? ಅಂದರೆ ಇಲ್ಲಿನ ಭೂಸ್ವರೂಪ, ಬೆಟ್ಟಗುಡ್ಡ, ನದಿ ವ್ಯವಸ್ಥೆ, ಹವಮಾನ, ವಾಯುಗುಣ, ಅಕ್ಷಾಂಶ ರೇಖಾಂಶಗಳು, ಸಸ್ಯವರ್ಗ, ಪ್ರಾಣಿವರ್ಗಗಳು ಒಂದು ಸಂಸ್ಕೃತಿ ಬೆಳೆಯಲು ಹೇಗೆ ಸಹಕಾರಿಯಾಗಿವೆ? ಇದರಿಂದ ಜನಸಂಖ್ಯೆ ಬೆಳವಣಿಗೆ, ಕೃಷಿ ಚಟುವಟಿಕೆ, ನೀರಾವರಿ ವ್ಯವಸ್ಥೆ, ರಾಜಕೀಯ ಎಲ್ಲೆ, ಸಾಮಾಜಿಕ, ಧಾರ್ಮಿಕ ಅಂಶಗಳು ಮುಂತಾದ ಅಂಶಗಳು ಕಾಲಾನುಕ್ರಮದಲ್ಲಿ ಯಾವ ರೀತಿ ಬೆಳವಣಿಗೆ ಹೊಂದಿದವು. ಒಂದು ಕಾಲಘಟ್ಟದಿಂದ ಇನ್ನೊಂದು ಕಾಲಘಟ್ಟದಲ್ಲಿ ಈ ಭೌಗೋಳಿಕ ಅಂಶಗಳು ಚರಿತ್ರೆಯ ನಿರ್ಮಾಣಕ್ಕೆ ಯಾವ ರೀತಿ ಕಾರಣವಾದವು. ಸಾಂಸ್ಕ್ರತಿಕ ಭೂಗೋಳದ ಬೆಳವಣಿಗೆ ಹೇಗೆ ಹೊಂದಿತು ಎಂದು ತಿಳಿಯಬಹುದಾಗಿದೆ. ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಹಾಗೂ ಸಾಂಸ್ಕತಿಕ ಭೂಗೋಳಕ್ಕೆ ಸಂಬಂಧಿಸಿದಂತೆ (ಪೂರ್ವ ಇತಿಹಾಸ ಕಾಲದಿಂದ ಕ್ರಿ.ಶ. 18ನೇ ಶತಮಾನದವರೆಗೆ) ಈ ಪ್ರದೇಶವನ್ನು ಮಾನವ ಹೇಗೆ ಕಾಲಾನುಘಟ್ಟದಲ್ಲಿ ಬಳಸಿಕೊಂಡ ಅದಕ್ಕೆ ಪೂರಕವಾಗಿ ಚಾರಿತ್ರಿಕ ಸಾಂಸ್ಕೃತಿಕ ಹಾಗೂ ಭೌಗೋಳಿಕ ಅಂಶಗಳು ಮಾನವನ ಬೆಳವಣಿಗೆಗೆ ನೆಲೆಗೊಳ್ಳಲು ಯಾವ ರೀತಿ ಸಹಕಾರವಾದವು ಎಂಬುದನ್ನು ಈ ಪ್ರಂಬಂಧದಲ್ಲಿ ಚರ್ಚಿಸಲಾಗಿದೆ.

ಅಧ್ಯಯನದ ಸ್ವರೂಪ:

ಈ ಸಂಶೋಧನಾ ಪ್ರಬಂಧದಲ್ಲಿ ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ಏಳು ಅಧ್ಯಯಗಳನ್ನಾಗಿ ಮಾಡಿಕೊಂಡು ಅವುಗಳ ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಕಂಡಂತೆ ನೀಡಲಾಗಿದೆ. ಅವುಗಳೆಂದರೆ; ಮೊದಲನೆಯ ಅಧ್ಯಾಯದಲ್ಲಿ ಪೀಠಿಕೆ, ಅರ್ಥ ಮತ್ತು ವ್ಯಾಖ್ಯೆ, ಅಧ್ಯಯನದ ಸ್ವರೂಪ, ವ್ಯಾಪ್ತಿ, ಮಹತ್ವ, (ಉದ್ದೇಶ) ಸಂಶೋಧನಾ ವಿಧಾನ, ಐತಿಹಾಸಿಕ ಹಿನ್ನೆಲೆ ಮತ್ತು ಅಧ್ಯಯನಕ್ಕೆ ಉಪಯೋಗಿಸಿರುವ ಆಕರಗಳನ್ನು ಹಾಗೂ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಭೂಗೋಳ ಕುರಿತ ಬರವಣಿಗೆಗಳ ಸಮೀಕ್ಷೆ ಕುರಿತು ಚರ್ಚಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಪೂರ್ವ ಇತಿಹಾಸ ಕಾಲ–ಹಳೆ ಶಿಲಾಯುಗ, ಮಧ್ಯ ಶಿಲಾಯುಗ, ನೂತನ ಶಿಲಾಯುಗ, ತಾಮ್ರ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಕಾಲದವರೆಗಿನ ನೆಲೆಗಳನ್ನು ಕುರಿತು ಕೇತ್ರಕಾರ್ಯಗಳ ಆಧಾರದಲ್ಲಿ ಚರ್ಚಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ಇತಿಹಾಸ ಆರಂಭ (ಐತಿಹಾಸಿಕ) ಕಾಲದಿಂದ ಅಂದರೆ ಕ್ರಿ.ಪೂ. 3ನೇ ಶತಮಾನದಿಂದ ಕ್ರಿ.ಶ. 10ನೇ ಶತಮಾನದವರೆಗಿನ ನೆಲೆಗಳ ಕುರಿತು ಕ್ಷೇತ್ರಕಾರ್ಯ ಹಾಗೂ ಶಾಸನಗಳ ಆಧಾರದಲ್ಲಿ ಚರ್ಚಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಕ್ರಿ.ಶ. 11ನೇ ಶತಮಾನದಿಂದ ಕ್ರಿ.ಶ. 14ನೇ ಶತಮಾನದ ಮಧ್ಯದವರೆಗಿನ ನೆಲೆಗಳ ಕುರಿತು ಕ್ಷೇತ್ರಕಾರ್ಯ ಮತ್ತು ಶಾಸನಗಳ ಆಧಾರದಲ್ಲಿ ಚರ್ಚಿಸಲಾಗಿದೆ. ಐದನೆಯ ಅಧ್ಯಾಯದಲ್ಲಿ 14ನೇ ಶತಮಾನದ ಮಧ್ಯಭಾಗದಿಂದ (ವಿಜಯನಗರ ಕಾಲದ) ಕ್ರಿ.ಶ. 16ನೇ ಶತಮಾನದ ನೆಲೆಗಳ ಕುರಿತು ಚರ್ಚಿಸಲಾಗಿದೆ. ಆರನೆಯ ಅಧ್ಯಾಯದಲ್ಲಿ ಪಾಳೆಗಾರರ ಕಾಲದ ನೆಲೆಗಳನ್ನು ಕ್ರಿ.ಶ. 16–18ನೇ ಶತಮಾನದ ಅಂತ್ಯದವರೆಗೆ ಚರ್ಚಿಸಲಾಗಿದೆ. ಏಳನೆಯ ಅಧ್ಯಾಯವು ಉಪಸಂಹಾರವಾಗಿದ್ದು, ಮೇಲಿನ ಅಧ್ಯಾಯಗಳಲ್ಲಿ ಕಂಡುಬರುವ ವಿಷಯಗಳ ಸಾರಾಂಶವನ್ನು ಹಾಗೂ ಅವುಗಳ ಫಲಿತಗಳನ್ನು ನೀಡಲಾಗಿದೆ. ಇದರ ಜೊತೆಗೆ ಗ್ರಂಥಋಣ, ನಕ್ಷೆಗಳು, ಹಾಗೂ ಛಾಯಚಿತ್ರಗಳನ್ನು ಸಂದರ್ಭೋಚಿತವಾಗಿ ಪ್ರಬಂಧದ ಕೊನೆಯಲ್ಲಿ ನೀಡಲಾಗಿದೆ.

ಅಧ್ಯಯನದ ವ್ಯಾಪ್ತಿ:

ಪ್ರಸ್ತುತ ಸಂಶೋಧನಾ ವಿಷಯವಾದ 'ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಗೋಳಕ್ಕೆ' ಸಂಬಂಧಿಸಿದಂತೆ ಪುರಾತತ್ವ ಪ್ರಾಚ್ಯ ಕುರುಹುಗಳು, ಶಾಸನಗಳು, ನಾಣ್ಯಗಳು, ದೇವಾಲಯಗಳು, ಸ್ಮಾರಕಗಳು, ಶಿಲ್ಪಗಳು, ಮಾನವನ ಜನಾಂಗೀಯ ವ್ಯವಸ್ಥೆ, ಬದುಕಿದ ರೀತಿ, ಕಲೆ, ಸಾಹಿತ್ಯ, ಧರ್ಮ ಇವುಗಳನ್ನು ಆಧರಿಸಿ ಮಾನವನ ಇತಿಹಾಸದ ಏಳುಬೀಳಿನ ಇತಿಹಾಸವನ್ನು ನಾವು ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಇದರಿಂದಾಗಿ ಈ ಅಧ್ಯಯನವು ಪೂರ್ವ ಇತಿಹಾಸ ಕಾಲದಿಂದ 18ನೇ ಶತಮಾನದವರೆಗೆ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಗೋಳದಲ್ಲಿ ಬದಲಾವಣೆಗಳನ್ನು ತಿಳಿಯಲಾಗಿದೆ. ಇದರ ವ್ಯಾಪ್ತಿಯು ತುಂಬಾ ವಿಶಾಲವಾಗಿದ್ದು, ಆ ಪ್ರದೇಶದ ಮಾನವನ ಪ್ರಮುಖ ವಿಭಿನ್ನ ಜೀವನ ವಿಧಾನಗಳು ಒಳಗೊಂಡಿದೆ.

ಅಧ್ಯಯನದ ಉದ್ದೇಶ:

ಚಿತ್ರದುರ್ಗ ಜಿಲ್ಲೆಯು ಕರ್ನಾಟಕ ರಾಜ್ಯದಲ್ಲಿ ಕೋಟೆನಾಡು ಎಂದು ವಿಶಿಷ್ಟ ಸ್ಥಾನವನ್ನು ಪಡೆದು ಕೊಂಡಿದೆ. ಪೌರಾಣಿಕ ಹಿನ್ನಲೆಯಲ್ಲಿ ಚಿತ್ರದುರ್ಗವನ್ನು ವಿವಿಧ ಹೆಸರುಗಳಿಂದ ಕರೆಯುತಿದ್ದರು. ಈ ಹಿನ್ನಲೆಯಲ್ಲಿ ಈ ಹೆಸರುಗಳು ಹೇಗೆ ಬಂದವು? ಇವುಗಳು ಬಂದಿರುವ ಉದ್ದೇಶವೇನು? ಈ ಹೆಸರು ಬರಲು ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಭೂಗೋಳ ಕಾರಣವಾಯಿತೆ? ಹಾಗೂ ಇಲ್ಲಿ ಶಿಲಾಯುಗದ

ಮಾನವನು ವಾಸವಾಗಿದ್ದು, ಈ ಮಾನವನು ಇಲ್ಲಿ ವಾಸ ಮಾಡಲು ಅವನಿಗೆ ಇಲ್ಲಿನ ಭೌಗೋಳಿಕ ಹಿನ್ನಲೆ ಎಂದರೆ ನದಿ, ಬೆಟ್ಟಗುಡ್ಡ, ಕಾಡು ಯಾವ ರೀತಿ ಕಾರಣವಾದವು? ನಂತರ ಇಲ್ಲಿ ಲೋಹಯುಗದ ಅಂದರೆ ತಾಮ್ರಯುಗ, ಕಬ್ಬಿಣಯುಗದ ಮಾನವನು ನೆಲೆಗೊಳ್ಳಲು ಹಾಗೂ ಲೋಹದ ಆಯುಧಗಳನ್ನು ತಯಾರು ಮಾಡಲು ಇಲ್ಲಿ ತಾಮ್ರ ಹಾಗೂ ಕಬ್ಬಿಣದ ನಿಕ್ಷೇಪಗಳಿದ್ದವೆ, ಇದ್ದರೆ ಇದಕ್ಕೆ ಇಲ್ಲಿನ ಭೌಗೋಳಿಕ ಅಂಶಗಳು ಕಾರಣಗಳೇ ನಂತರ ಉತ್ತರ ಭಾರತದ ಅರಸರಾದ ಮೌರ್ಯರು, ಶಾತವಾಹನರು ಇಲ್ಲಿಯವರೆಗೆ ತಮ್ಮ ಸಾಮ್ರಾಜ್ಯ ವಿಸ್ತರಿಸಲು ಇಲ್ಲಿಯ ಶ್ರೀಮಂತಿಕೆಯೇ ಕಾರಣವಾಯಿತೆ ಎಂಬ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಅವುಗಳಿಗೆ ಉತ್ತರ ಹುಡುಕಿರುವುದೇ ಈ ಪ್ರಬಂಧದ ಮುಖ್ಯ ಉದ್ದೇಶವಾಗಿದೆ. ಇದಲ್ಲದೆ ಈ ಪ್ರದೇಶಕ್ಕೆ ಸಂಬಂಧಿಸಿದಂತೆ ಐತಿಹಾಸಿಕ ಜ್ಞಾನವನ್ನು ಪ್ರಚುರ ಪಡಿಸುವುದು, ಜನಸಂಖ್ಯಾ ಸ್ಥಿತಿ, ಮಾನವ ನೆಲೆಗೊಂಡ ವಾಸಸ್ಥಾನದ ಮಾಹಿತಿ, ಕೃಷಿ ಚಟುವಟಿಕೆ, ಪಶುಸಂಗೋಪನೆ, ಬೇಟೆಗಾರಿಕೆ, ಕುಂಬಾರಿಕೆ, ಕರಕುಶಲ ಕಲೆಗಳು ಮತ್ತು ಸಮಾಜದ ದೃಷ್ಟಿಯಿಂದ ಅವುಗಳ ಉತ್ಪಾದನೆಯ ರೀತಿ, ಇವುಗಳ ಮೇಲೆ ಉಳ್ಳವನ ಹಿಡಿತ, ರಾಜ್ಯ ರಚನೆ, ರಾಜ್ಯದ ಸ್ವರೂಪ, ಎಲ್ಲೆ, ನಾಡುಗಳ ಕಟ್ಟುವಿಕೆ ಇವುಗಳೆಲ್ಲದರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಂಶಗಳಾದ ಕಲಾ ಶೈಲಿಯ ರಚನೆಗಳು, ಪ್ರಕಾರಗಳು, ನೀರಿನ ನಿರ್ವಹಣೆ ಹಾಗೂ ಭೂಮಿಯ ಬಳಕೆಯ ಮಾದರಿಯೊಂದಿಗೆ ಹಬ್ಬಹರಿದಿನ, ಉತ್ಸವ, ಜಾತ್ರೆ, ಮಹೋತ್ಸವ, ದೇವಾಲಯಗಳ ನಿರ್ಮಾಣ, ಸಾಮಾಜಿಕ ಪದ್ಧತಿಗಳು, ಧಾರ್ಮಿಕ ನಂಬಿಕೆಗಳು, ಆಚರಣೆಗಳು ಇವುಗಳ ಆಚರಣೆಯಲ್ಲಿ ಕಾಲಾನುಘಟ್ಟದಲ್ಲಿ ಯಾವ ರೀತಿ ಪ್ರಾದೇಶಿಕ ವಿಭಾಗಗಳು ರಚನೆಗೊಂಡವು, ಇವು ಚಾರಿತ್ರಿಕ ಹಾಗೂ ಸಾಂಸ್ಕೃತಿಕವಾಗಿ ಯಾವ ರೀತಿ ಪ್ರಭಾವ ಬೀರಿದವು, ಹಾಗೂ ಇವು ಒಂದು ಸಾಂಸ್ಕೃತಿಕ ಬೆಳವಣಿಗೆಗೆ ಮತ್ತು ಅವನತಿಗೆ ಹೇಗೆ ಕಾರಣವಾದವು ಎಂಬುದನ್ನು ತಿಳಿಯಲಾಗಿದೆ.

ಸಂಶೋಧನಾ ವಿಧಾನ:

ಪ್ರಸ್ತುತ ಅಧ್ಯಯನದಲ್ಲಿ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಪೂರ್ವ ಇತಿಹಾಸ ಕಾಲದಿಂದ ಕ್ರಿ.ಶ. 18ನೇ ಶತಮಾನದವರೆಗಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಗೋಳದ ಅಧ್ಯಯನವನ್ನು ಚರಿತ್ರೆಯ ಸಂಶೋಧನ ವಿಧಾನಗಳಾದ ಆಕರಗಳ ಸಂಗ್ರಹಣೆ, ಅವುಗಳ ವಿಶ್ಲೇಷಣೆ, ವರ್ಗೀಕರಣ ಮತ್ತು ಒಂದು ಮಾದರಿಯ ಆಕರಗಳನ್ನು ಇನ್ನೊಂದು ಮಾದರಿಯ ಆಕರಗಳೊಡನೆ ಹೋಲಿಸಿ ಅಧ್ಯಯನ ಮಾಡಿರುವುದು, ಹಾಗೂ ಕ್ಷೇತ್ರಕಾರ್ಯದ ಮೂಲಕ ಈ ಜಿಲ್ಲೆಯಲ್ಲಿ ವಿವಿಧ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿ ಗ್ರಾಮದ ಹಿರಿಯರು, ವಿದ್ವಾಂಸರು, ಸಂಪನ್ಮೂಲ ವ್ಯಕ್ತಿಗಳಿಂದ ಅಲ್ಲಿನ ಐತಿಹಾಸಿಕ, ಪೌರಾಣಿಕ ಮತ್ತು ಸಾಂಸ್ಕೃತಿಕ ಮಾಹಿತಿಯನ್ನು ಸಂಗ್ರಹಿಸಿ ಅವುಗಳನ್ನು ಪರಾಮರ್ಶಿಸಿ, ವಿಶ್ಲೇಷಣಾತ್ಮಕವಾಗಿ ವರ್ಗೀಕರಿಸಿ ಅವುಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಇದಲ್ಲದೆ ಕ್ಷೇತ್ರಕಾರ್ಯದ ಸಮಯದಲ್ಲಿ ಛಾಯಚಿತ್ರ ತೆಗೆದಿರುವುದು, ಅಂಕಿಅಂಶಗಳು ಪ್ರಕಾರ ಮಾಹಿತಿಯನ್ನು ಸಂಗ್ರಹಿಸಿರುವುದು, ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಭೂನಕ್ಷೆಗಳ ಮೂಲಕ ತಿಳಿಸಿರುವುದುದು, ಅಂತರ್ ಜಾಲದಲ್ಲಿ ದೊರೆಯುವ ಕೆಲವು ಮಾಹಿತಿಗಳನ್ನು ಉಪಯೋಗಿಸಿಕೊಂಡಿರುವುದು, ಹಾಗೂ ಕ್ಷೇತ್ರಕಾರ್ಯಕ್ಕೆ ಅವಶ್ಯಕವಾದ ಉಪಕರಣಗಳನ್ನು ಬಳಸಿಕೊಂಡು ಹೆಚ್ಚು ಮಾಹಿತಿಯನ್ನು ಕಲೆ ಹಾಕಿ ಅವುಗಳನ್ನು ಆಕರಗಳಾಗಿ ಬಳಸಿಕೊಳ್ಳಲಾಗಿದೆ.

ಬರವಣಿಗೆಗಳ ಸಮೀಕ್ಷೆ:

ಚಾರಿತ್ರಿಕ ಭೂಗೋಳದ ಕಲ್ಪನೆ ಮೊಟ್ಟ ಮೊದಲಿಗೆ ಕ್ರಿ.ಶ. 17ನೇ ಶತಮಾನದಲ್ಲಿ 'ಫಿಲಿಫ್ ಕ್ಲುವರ್' ಪ್ರಕಟ ಪಡಿಸಿದ "ಹಿಸ್ಟಾರಿಕಲ್ ಜಿಯಾಗ್ರಫಿ ಆಫ್ ಜರ್ಮನಿ" ಎಂಬ ಕೃತಿಯಲ್ಲಿ ನೀಡಲಾಗಿದೆ. ಇದರಲ್ಲಿ ಭೂಮಿಯ ಬಗೆಗಿನ ಜ್ಞಾನದೊಂದಿಗೆ ಅದರ ವಿಭಾಗೀಯತೆಯನ್ನು ಕೂಡ ಕಾಣಲು ಸಾಧ್ಯವಾಯಿತು. ನಂತರ 19ನೇ ಶತಮಾನದಲ್ಲಿ ಇತಿಹಾಸದ ಮೂಲ ಅಧ್ಯಯನಕ್ಕೆ ಭೂಗೋಳಶಾಸ್ತ್ರದ ಅಗತ್ಯತೆಯ ಅರಿವು ಮೂಡಿತೆನ್ನಬಹುದು. 20ನೇ ಶತಮಾನದ ಪೂರ್ವಭಾಗದಲ್ಲಿ ಇತಿಹಾಸದ ಮೇಲೆ ಸಂಪೂರ್ಣವಾಗಿ ಭೂಗೋಳದ ಪ್ರಭಾವವನ್ನು ಕಾಣಬಹುದು. ಅಲ್ಲಿಂದ ಈಚೆಗೆ ಇದೊಂದು ಸಂಶೋಧನಾ ವಿಷಯವಾಗಿ ಬೆಳೆಯಲು ಕಾರಣವಾಗಿದೆ.

ಭಾರತದ ಮಟ್ಟಿಗೆ ಹೇಳುವುದಾದರೆ ಚಾರಿತ್ರಿಕ ಭೂಗೋಳದ ಅಧ್ಯಯನವು ಬಹಳಷ್ಟು ಸೀಮಿತವಾಗಿದೆ. ಮೊದಲ ಬಾರಿಗೆ ಕ್ರಿ.ಶ. 1871ರಲ್ಲಿ ಅಲೆಕ್ಸಾಂಡರ್ ಕನ್ನಿಂಗ್ ಹ್ಯಾಮ್ ರವರು 'ಜಿಯಾಗ್ರಾಫಿ ಆಫ್ ಏನ್ಸಿಯಂಟ್ ಇಂಡಿಯಾ' ದಲ್ಲಿ ಪ್ರಾಚೀನ ಭಾರತದ ಭೂಗೋಳದ ಬಗೆಗೆ ಮಾಹಿತಿ ನೀಡಿದರು. 1949ರಲ್ಲಿ ಸಿ.ಸಿ. ಡೇವಿಡ್ ರವರ 'ಆನ್ ಹಿಸ್ಟಾರಿಕಲ್ ಅಟ್ಲಾಸ್ ಆಫ್ ದಿ ಇಂಡಿಯನ್ ಪೆನಿನ್ಸುಲಾ', ಹಾಗೂ ಹೆಚ್. ಡಿ, ಸಂಕಾಲಿಯವರ 'ಸ್ಟಡೀಸ್ ಇನ್ ದಿ ಹಿಸ್ಟಾರಿಕಲ್ ಆಂಡ್ ಕಲ್ಚರಲ್ ಜಿಯಾಗ್ರಫಿ ಆಂಡ್ ಎತ್ನೋಲಜಿ ಆಫ್ ಗುಜರಾತ್' ಗ್ರಂಥಗಳು ಈ ಅಧ್ಯಯನದ ಉದ್ದೇಶ ಮತ್ತು ವಿಧಾನಗಳನ್ನು ತಿಳಿಸುತ್ತವೆ. 1954ರಲ್ಲಿ ಬಿ.ಸಿ.ಲಾಲ್ ರವರ 'ಹಿಸ್ಟಾರಿಕಲ್ ಜಿಯಾಗ್ರಫಿ ಆಫ್ ಏನ್ಸಿಯೆಂಟ್ ಇಂಡಿಯಾ' 1963ರಲ್ಲಿ ಎಂ. ಎಸ್. ಪಾಂಡೆಯವರ 'ಹಿಸ್ಟಾರಿಕಲ್ ಜಿಯಾಗ್ರಫಿ ಆಫ್ ಮಧ್ಯಪ್ರದೇಶ್ ಫ್ರಂ ಅರ್ಲಿ ರೆಕಾರ್ಡ್ಸ್', 2003ರಲ್ಲಿ ಜಹೂರ್ ಅಲಿ ಖಾನ್‌ರವರ 'ಹಿಸ್ಟಾರಿಕಲ್ ಜಿಯಾಗ್ರಫಿ ಆಫ್ ದಿ ಗಹಡ್ವಾಲ ಕಿಂಗ್‌ಡಮ್', 2005ರಲ್ಲಿ ಇರ್ಫಾನ್ ಹಬೀಬ್ ಮತ್ತು ಫಯಾಜ್ ಹಬೀಬ್‌ರವರ 'ಅರ್ಲಿ ಹಿಸ್ಟಾರಿಕಲ್ ಜಿಯಾಗ್ರಫಿ ಆಫ್ ಸೌತ್ ಇಂಡಿಯಾ ಆಂಡ್ ಶ್ರೀಲಂಕಾ ಫ್ರಂ ಇನ್‌ಸ್ಕ್ರಿಪ್ಷನ್ಸ್' ಎಂಬ ಲೇಖನಗಳು ಮಾಹಿತಿಯನ್ನು ನೀಡುತ್ತವೆ.

ಆದರೆ ಕರ್ನಾಟಕದ ಐತಿಹಾಸಿಕ ಭೌಗೋಳಿಕತೆಗೆ ಸಂಬಂಧಿಸಿದಂತೆ ಇರುವ ಮಾಹಿತಿಗಳು ಕಡಿಮೆಯೆಂದೇ ಹೇಳಬಹುದು. ಅದರಲ್ಲಿ ಮುಖ್ಯವಾಗಿ 1987ರಲ್ಲಿ ಪಿ.ವಿ. ಕೃಷ್ಣಮೂರ್ತಿಯವರ "ಚಿತ್ರದುರ್ಗ ಜಿಲ್ಲೆಯ ಚಾರಿತ್ರಿಕ ಭೂಗೋಳ" ಎಂಬ ಲೇಖನ ಹಾಗೂ 1987ರಲ್ಲಿ ಡಾ.ಎಂ.ಎಸ್. ಕೃಷ್ಣಮೂರ್ತಿಯವರ "ನೊಳಂಬರ ಕಾಲದ ಪ್ರಾದೇಶಿಕ ವಿಭಾಗಗಳು" ಎಂಬ ಲೇಖನಗಳು, ಎಂ.ಎಂ. ಕಲುಬುರ್ಗಿ ಸಂಪಾದಕತ್ವದ 'ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು' ಭಾಗ–1 (1999), ಹಾಗೂ 'ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು' (2014) ಇವುಗಳು ಕನ್ನಡ ಭಾಷೆಯಲ್ಲಿ ರಚನೆಯಾಗಿರುವುದನ್ನು ಬಿಟ್ಟರೆ ಬೇರೆ ಕೃತಿಗಳು ಲಭ್ಯವಿಲ್ಲ. 2008ರಲ್ಲಿ ಕೇಶವನ್ ವೆಲುತ್ತಾಟ್ ರವರ 'ಹಿಸ್ಟಾರಿಕಲ್ ಅಟ್ಲಾಸ್ ಆಫ್ ಸೌತ್ ಇಂಡಿಯ ಫ್ರಮ್ ಹಿಸ್ಟಾರಿಕಲ್ ಟೈಮ್ ಟು ಸಿಕ್ಸ್‌ಟೀನ್ತ್ ಸೆಂಚುರಿ ಎ.ಡಿ., ಹನುಮ ನಾಯಕ ರವರ 'ಹಿಸ್ಟಾರಿಕಲ್ ಜಿಯಾಗ್ರಫಿ ಆಫ್ ಅರಿಸೀಕೆರೆ ತಾಲ್ಲೂಕು ಮತ್ತು ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಚಾರಿತ್ರಿಕ ಭೂಗೋಲ' ಎಂಬ ಪಿಹೆಚ್.ಡಿ ಮಹಾ ಪ್ರಬಂಧವನ್ನು ಬಿಟ್ಟರೆ ಉಳಿದ್ಯಾವುದೂ ಕಾಣಬರುವುದಿಲ್ಲ.

ಕೆ.ಬಿ. ಶಿವತಾರಕ್‌ರವರು 'ಕರ್ನಾಟಕ ಪುರಾತತ್ವ ನೆಲೆಗಳು'(2001) ಗ್ರಂಥದಲ್ಲಿ ಕರ್ನಾಟಕ ಪುರಾತತ್ವ ನೆಲೆಗಳನ್ನು ಗುರುತಿಸಿ ಇದರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಬರುವ ಪೂರ್ವ ಇತಿಹಾಸ

ಕಾಲದಿಂದ ಮೌರ್ಯ–ಶಾತವಾಹನ ಯುಗದ ಕಾಲದವರೆಗಿನ ನೆಲೆಗಳನ್ನು ಗುರುತ್ತಿಸಿದ್ದಾರೆ. ಎಸ್.ಜಿ. ರಾಮದಾಸ ರೆಡ್ಡಿಯವರು 'ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ' ಎಂಬ (2009) ಗ್ರಂಥದಲ್ಲಿ ವೇದಾವತಿ ಹಾಗೂ ಚಿನ್ನಹಗರಿ ನದಿ ತೀರದ ನೆಲೆಗಳನ್ನು ಗುರುತಿಸಿ ಈ ನೆಲೆಗಳು ಅಲ್ಲಿ ಕಂಡುಬರುವುದಕ್ಕೆ ಈ ನದಿ ಪಾತ್ರಗಳೇ ಕಾರಣ ಎಂಬುದಾಗಿ ತಿಳಿಸಿದ್ದಾರೆ. ಎಸ್.ವೈ.ಸೋಮಶೇಖರ್ ಸಂಪಾದಿಸಿದ 'ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ' ಮಾಲೆ–3. ಬ್ರಹ್ಮಗಿರಿ ಲೇಖನಗಳಲ್ಲಿ ಬ್ರಹ್ಮಗಿರಿ ನೆಲೆಗಳನ್ನು ಕುರಿತು ಮಾಹಿತಿಯನ್ನು ನೀಡಿದ್ದಾರೆ.

ಚಿತ್ರದುರ್ಗದ ಬಗ್ಗೆ ಪ್ರಾಥಮಿಕ ಆಕರಗಳನ್ನು ಇಟ್ಟುಕೊಂಡು ವೈಜ್ಞಾನಿಕ ಅಧ್ಯಯನ ಮಾಡಿದವರಲ್ಲಿ ಬಿ.ಎಲ್. ರೈಸ್‌ರವರು ಪ್ರಥಮರು ಎನ್ನಬಹುದು. ಶಿಕ್ಷಣ ಕ್ಷೇತ್ರದಲ್ಲಿದ್ದ ರೈಸ್‌ರವರು ಮೊದಲು ಕೊಡಗು, ಚಿತ್ರದುರ್ಗ ಮೊದಲಾದ ಕಡೆ ಶಾಸನಗಳನ್ನು ಸಂಗ್ರಹಿಸಿ ಮೊದಲ ಬಾರಿ 1903ರಲ್ಲಿ ಚಿತ್ರದುರ್ಗ ಜಿಲ್ಲೆಯ ಶಾಸನಗಳನ್ನು ಸಂಗ್ರಹಿಸಿ "ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–11" ನ್ನು ಸಂಪಾದಿಸಿದರು. ಇದು ಸಂಶೋಧನಾ ಕ್ಷೇತ್ರದ ಬೈಬಲ್ ಎಂದೇ ಹೇಳಬಹುದು. ಚಿತ್ರದುರ್ಗ ಜಿಲ್ಲೆಯು ಒಟ್ಟು 618 ಶಾಸನಗಳನ್ನು ಹೊಂದಿದ್ದು, ಇವು ಚಿತ್ರದುರ್ಗದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಗೋಳವನ್ನು ಕಟ್ಟುವಲ್ಲಿ ಸಹಕಾರಿಯಾಗಿವೆ. 1967ರಲ್ಲಿ ಬಿ.ಎನ್. ಸತ್ಯನ್‌ರವರು ಮೈಸೂರು ಗೆಜೆಟಿಯರ್ ಸಂಪುಟದಲ್ಲಿ "ಚಿತ್ರದುರ್ಗ ಡಿಸ್ಟ್ರಿಕ್ಟ್ ಗೆಜೆಟಿಯರ್" ಗ್ರಂಥವನ್ನು ಹೊರತಂದರು. ಇದರಲ್ಲಿ ಚಿತ್ರದುರ್ಗ ಜಿಲ್ಲೆಯ ಸಮಗ್ರ ಇತಿಹಾಸವನ್ನು ಕಾಲಗಣನೆಯ ಆಧಾರದಲ್ಲಿ ಗುರುತಿಸಲಾಗಿದೆ. 1994ರಲ್ಲಿ ಕಲುಬುರಗಿಯವರು ಕರ್ನಲ್ ಮೆಕೆನ್ಸಿಯವರ ಕೈಫಿಯತ್‌ಗಳನ್ನು ಆಧರಿಸಿ "ಕರ್ನಾಟಕ ಕೈಫಿಯತ್ತುಗಳು" ಎಂಬ ಪುಸ್ತಕವನ್ನು ರಚಿಸಿದರು. ಇದು ಇತಿಹಾಸದ ಆಧಾರಗಳಲ್ಲಿ ದ್ವಿತೀಯ ಸ್ಥಾನಕ್ಕೆ ಸೇರುತ್ತದೆ ಹಾಗೂ ಮಧ್ಯಯುಗದ ಸಾಮಾನ್ಯ ವರ್ಗದವರ ಚಟುವಟಿಕೆಗಳನ್ನು ತಿಳಿಸುವಲ್ಲಿ ಪ್ರಥಮ ಸ್ಥಾನ ಹೊಂದಿದೆ. ಅಲ್ಲದೆ ಕೈಫಿಯತ್‌ಗಳಲ್ಲಿ ವಾಸ್ತವ ಜೀವನದ ವಿವರಗಳನ್ನು ಒದಗಿಸಿ ಬದುಕಿನ ಮುಚ್ಚಿಹೋದ ಮುಖಗಳನ್ನು ಬಿಚ್ಚಿ ತೋರಿಸುತ್ತದೆ. ಕೈಫಿಯತ್‌ಗಳು ಗ್ರಾಮ, ಕೋಟೆ, ಕೊತ್ತಲ, ಕೆರೆ, ದೇವಾಲಯಗಳ ನಿರ್ಮಾಣ, ವಿವರಗಳನ್ನಲ್ಲದೆ ಸಾಮಾಜಿಕ ಸಂಘರ್ಷ–ಸ್ನೇಹ, ಧಾರ್ಮಿಕ–ಆಚರಣೆ, ಉತ್ಸವ, ಮೂಡನಂಬಿಕೆ ಆಚರಣೆಗಳು, ಜಾತಿವ್ಯವಸ್ಥೆ, ಸಾಮಾಜಿಕ ವಿಷಯಗಳ ನಿರೂಪಣೆ ಹಾಗೂ ಕೃಷಿ, ವ್ಯಾಪಾರ, ವಾಣಿಜ್ಯ ಮೊದಲಾದ ಆರ್ಥಿಕ ಚಟುವಟಿಕೆಗಳ ಬಗ್ಗೆ ತಿಳಿಸಿಕೊಡುತ್ತದೆ.

1909ನೇಯ ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿಯು ಮೊದಲ ಬಾರಿಗೆ ಚಿತ್ರದುರ್ಗ ಜಿಲ್ಲೆಯ ದೇವಾಲಯಗಳು, ಪ್ರಾಚ್ಯಾವಶೇಷಗಳ ಬಗೆಗಿನ ವಿವರಗಳನ್ನು ಪ್ರಕಟಿಸಿದ್ದಲ್ಲದೆ ಮುಂದೇ ಆನೇಕ ಮೈಸೂರು ಅರ್ಕಿಯಾಲಾಜಿಕಲ್ ವರದಿಗಳು (ಎಂ.ಎ.ಆರ್) ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದ ಶಾಸನಗಳು, ದೇವಾಲಯಗಳು ಮೊದಲಾದ ಪುರಾತತ್ವ ವಿಷಯಗಳನ್ನು ಕುರಿತು ಪ್ರಕಟಿಸಿದರು. ಇದರಲ್ಲಿ ಎಂ.ಹೆಚ್.ಕೃಷ್ಣ ರವರು ಚಂದ್ರವಳ್ಳಿಯ ಕದಂಬರ ಶಾಸನವನ್ನು ಪತ್ತೆಹಚ್ಚಿ ಅದನ್ನು ಬೆಳಕಿಗೆ ತಂದರು. ನಂತರ ಬಿ. ರಾಜಶೇಖರಪ್ಪನವರು ಇದನ್ನು ಮರು ಪರಿಶೀಲನೆ ಓದಿ ಕದಂಬರ ಇತಿಹಾಸವನ್ನು ಬೇರೆ ದಿಕ್ಕಿನಲ್ಲಿ ಅಧ್ಯಯನ ಮಾಡಲು ಕಾರಣಕರ್ತರಾದರು. 1931ರಲ್ಲಿ ಎಂ.ಹೆಚ್.ಕೃಷ್ಣ ರವರು ಚಂದ್ರವಳ್ಳಿಯಲ್ಲಿ ಉತ್ಖನನ ಮಾಡಿದರು. ಈ ಉತ್ಖನನ ವರದಿಯು ಜಗತ್ತೇ ಕರ್ನಾಟಕದ ಚಿತ್ರದುರ್ಗದ ಕಡೆ ತಿರುಗಿ ನೊಡುವಂತೆ ಮಾಡಿತು. ಚೀನಾ ಹಾಗೂ ರೋಮ್‌ನೊಂದಿಗೆ ಚಿತ್ರದುರ್ಗ ಹೊಂದಿದ ಸಂಬಂಧವನ್ನು ಎತ್ತಿ ತೋರಿಸುತ್ತದೆ. 1947ರಲ್ಲಿ ಮಾರ್ಟಿಮ್ ವಿಲ್ಹೇರ್ ಹಾಗೂ

ಎಂ.ಹೆಚ್.ಕೃಷ್ಣ ರವರು ಮತ್ತೊಮ್ಮೆ ಬ್ರಹ್ಮಗಿರಿ ಚಂದ್ರವಳ್ಳಿಯಲ್ಲಿ ವೈಜ್ಞಾನಿಕ ಉತ್ಖನನ ಮಾಡಿದರು. ಈ ಉತ್ಖನನದ ವರದಿಯು "ಎನ್ಸಿಯಂಟ್ ಇಂಡಿಯಾ" ದ ನಾಲ್ಕನೆಯ ಸಂಪುಟದಲ್ಲಿ ಸವಿವಿವರವಾಗಿ ಬಂದಿತು. ಕೇಂದ್ರ ಪುರಾತತ್ವ ಇಲಾಖೆಯ ಎಂ.ಕೆ. ಮಿಶ್ರಾರವರ ಸೂಚನೆಯಂತೆ ಕೆ.ವಿ.ರಾವ್, ಶಿವಪ್ರಸಾದ್‌ರವರು ಮತ್ತೊಮ್ಮೆ 1978 ರಲ್ಲಿ ಚಂದ್ರವಳ್ಳಿಯಲ್ಲಿ ಉತ್ಖನನ ಮಾಡಿ ಚಂದ್ರವಳ್ಳಿಯ ಹೊಸ ವಿಷಯಗಳನ್ನು ಬೆಳಕಿಗೆ ತಂದರು ಹಾಗೂ 1940ರ ಮೈಸೂರು ಅರ್ಕಿಯಾಲಾಜಿಕಲ್ ರಿಪೋರ್ಟ್ ಪಾರ್ಟ್–4 "ಎಕ್ಸವೇಷನ್ ಇನ್ ಚಿತ್ರದುರ್ಗ ಡಿಸ್ಟ್ರಿಕ್ಟ್– ಬ್ರಹ್ಮಗಿರಿ ಸೈಟ್" ಇದರಲ್ಲಿ ಶಿಲಾಯುಗದಿಂದ ಶಾತವಾಹನರ ಕಾಲದವರೆಗಿನ ನೆಲೆಗಳನ್ನು ಸ್ತರಗಳ ವಿಂಗಡಣೆಯಲ್ಲಿ ಅಧ್ಯಯನ ಮಾಡಿರುವುದು ಮಹತ್ವವಾಗಿದೆ. ಅ.ಸುಂದರರವರ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ–1973ರ ಗ್ರಂಥ ಹಾಗೂ 1978ರಲ್ಲಿ ಚಿತ್ರದುರ್ಗದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಬಂಡೆಯಲ್ಲಿ ಕೊರೆದು ಉಜ್ಜಿ ಮೂಡಿಸಿದ ಕೆಲವು ರೇಖಾಚಿತ್ರಗಳ ಜೊತೆಗೆ ಕೆಲವು ಪ್ರಾಚ್ಯವಸ್ತುಗಳ ವಿವರಗಳನ್ನು ನೀಡಿದ್ದಾರೆ. 1983ರಲ್ಲಿ ಚಿತ್ರದುರ್ಗದ ಶ್ರೀಶೈಲ ಆರಾಧ್ಯರವರು ತಮ್ಮ 'ಸಂಶೋಧನೆಯ ಹಾದಿಯಲ್ಲಿ' ಎಂಬ ಪುಸ್ತಕದಲ್ಲಿ ಶಿಲಾಯುಗದ ರೇಖಾಚಿತ್ರಗಳು ಹಾಗೂ ಇತರೆ ಪ್ರಾಚ್ಯವಸ್ತುಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದಾರೆ. ಪಿ.ಕೃಷ್ಣರಾವ್‌ರವರ ಚಿತ್ರದುರ್ಗದ ಬೆಟ್ಟ ಹಾಗೂ ನಾಯಕ ಸಾಮ್ರಾಜ್ಯ ಎಂಬ ಲೇಖನಗಳು ಚಿತ್ರದುರ್ಗದ ಕೋಟೆ, ದೇವಸ್ಥಾನಗಳು ಹಾಗೂ ಪ್ರಾಚ್ಯವಸ್ತುಗಳು ಇತರೆ ಸ್ಮಾರಕಗಳನ್ನು ಪ್ರೇಕ್ಷಣಿಯ ಸ್ಥಳಗಳನ್ನು ಹಾಗೂ ಎರಡನೇ ಲೇಖನವು ತಿಮ್ಮಣ್ಣ ನಾಯಕನ ಸಾಹಸವನ್ನು ಚಿತ್ರಿಸುತ್ತದೆ. ಹುಲ್ಲೂರು ಶ್ರೀನಿವಾಸ ಜೋಯಿಸರು ಚಿತ್ರದುರ್ಗವನ್ನು ಕುರಿತು ಆನೇಕ ಬಿಡಿ ಲೇಖನಗಳನ್ನು ಬರೆದಿದ್ದಾರೆ. ಚಂದ್ರವಳ್ಳಿಯ ಕುರಿತು ಹಾಗೂ ಚಿತ್ರದುರ್ಗದ ಪಾಳೆಯಗಾರರನ್ನು ಕುರಿತು ಅನೇಕ ಲೇಖನಗಳನ್ನು ಬರೆದಿದ್ದಾರೆ. ರಾಜಕೀಯ, ಧಾರ್ಮಿಕ, ಸ್ಮಾರಕ ಶಿಲ್ಪಿಗಳು, ಪ್ರಾಚ್ಯವಸ್ತುಗಳ ಕುರಿತು ಪ್ರಾಥಮಿಕ ಆಕರಗಳನ್ನು ಆಧರಿಸಿ ಲೇಖನಗಳನ್ನು ಪ್ರಕಟಿಸಿ ಚಿತ್ರದುರ್ಗ ಇತಿಹಾಸವನ್ನು ಮರುಸೃಷ್ಟಿಸಿದ್ದಾರೆ. ಇವರ ಲೇಖನಗಳನ್ನು ಕ್ರೂಢೀಕರಣ ಮಾಡಿಕೊಂಡು 1976ರಲ್ಲಿ ಲಕ್ಷ್ಮಣ್ ತೆಲಗಾವಿ ಮತ್ತು ಎಂ. ವಿ. ಶ್ರೀನಿವಾಸ್ ಜೋಯಿಸರ ಐತಿಹಾಸಿಕ ಲೇಖನಗಳು ಹಾಗೂ ಹುಲ್ಲೂರು ಶ್ರೀನಿವಾಸ್ ಜೋಯಿಸರ ಸಂಶೋಧನ ಲೇಖನಗಳು ಎಂಬ ಎರಡು ಸಂಪುಟಗಳು ಚಿತ್ರದುರ್ಗ ಇತಿಹಾಸ ರಚನೆ ಮಾಡುವಲ್ಲಿ ಸಹಕಾರಿಯಾಗಿವೆ. ಬಿ.ಎಲ್. ರೈಸ್‌ರವರ ಶಾಸನಗಳನ್ನು ಆಧರಿಸಿ ಆರ್.ಎನ್. ಸಾಲೆತ್ತೊರ್‌ರವರು ಚಿತ್ರದುರ್ಗದ ಪಾಳೆಯಗಾರರ ವಂಶವೃಕ್ಷವನ್ನು ತುಂಬಾ ಅದ್ಬುತವಾಗಿ ಕಟ್ಟಿಕೊಟಿದ್ದಾರೆ. 1924ರಲ್ಲಿ ಎಂ.ಎಸ್. ಪುಟ್ಟಣ್ಣನವರು ಹಸ್ತಪ್ರತಿಗಳು ಹಾಗೂ ಇತರೆ ದಾಖಲೆಗಳನ್ನು ಸಂಗ್ರಹಿಸಿ ಮೊಟ್ಟಮೊದಲ ಬಾರಿಗೆ ಚಿತ್ರದುರ್ಗ ಪಾಳೆಯಗಾರರ ಕುರಿತ ಸಂಪೂರ್ಣ ಚಿತ್ರದುರ್ಗ ಪಾಳೆಯಗಾರರ ಇತಿಹಾಸವನ್ನು "ಚಿತ್ರದುರ್ಗದ ಪಾಳೆಯಗಾರರು" ಎಂಬ ಪುಸ್ತಕದಲ್ಲಿ ಹೊರ ತಂದರು. ಇಂದೂ ಈ ಕೃತಿಯನ್ನು ಪರಾಮರ್ಶಿಸಿ ಚಿತ್ರದುರ್ಗದ ಪಾಳೆಯಗಾರರ ಇತಿಹಾಸವನ್ನು ಕಟ್ಟಿ ಕೊಡಲು ಸಾಧ್ಯವಾಗಿದೆ. ಮಿಥಿಕ್ ಸೊಸೈಟಿಯ ತ್ರೈಮಾಸಿಕದಲ್ಲಿ ಚಿತ್ರದುರ್ಗದ ಪರಿಸರ, ಚರಿತ್ರೆ, ಪ್ರಾಚ್ಯವಸ್ತುಗಳನ್ನು ಕುರಿತು ಸವಿವರವಾದ ಲೇಖನಗಳನ್ನು ಪ್ರಕಟಿಸಿಲಾಗಿದೆ. ಹಿರಿಯ ಮದಕರಿನಾಯಕನನ್ನು ಕುರಿತು ಜಿ.ಎನ್. ಸಾಲತ್ತೊರೆಯವರು ಮಿಥಿಕ್ ಸೊಸೈಟಿಯ ತ್ರೈಮಾಸಿಕದಲ್ಲಿ ಪ್ರಕಟಿಸಿದ ಲೇಖನಗಳು ಚಿತ್ರದುರ್ಗದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಸಹಕಾರಿಯಾಗಿವೆ. ನಾಡಿನ ಹೆಸರಾಂತ ವಿದ್ವಾಂಸರುಗಳಿಂದ ಪುರಾತತ್ವ ವಸ್ತುಗಳು, ಸ್ಮಾರಕಗಳು, ಶಾಸನಗಳು, ತಾಳೆಗರಿ, ಹಸ್ತಪ್ರತಿಗಳು ಇವುಗಳನ್ನು ಆಧರಿಸಿ ಚಿತ್ರದುರ್ಗ ಜಿಲ್ಲೆಯ ಕುರಿತು ತಮ್ಮ ಲೇಖನಗಳನ್ನು ಬರೆದಿದ್ದಾರೆ. ಅವುಗಳ ಸಂಗ್ರಹಿಸಿದ ಪುಸ್ತಕವನ್ನು ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮಂಡಲಿ. ಎಂ.ವಿ. ಶ್ರೀನಿವಾಸ್ ಮತ್ತು ಲಕ್ಷ್ಮಣ್ ತೆಲಗಾವಿ ಇವರ ಸಂಪಾದಕತ್ವದ ಚಂದ್ರವಳ್ಳಿ ಎಂಬ

ಪುಸ್ತಕವು ಇಂದೂ ಚಿತ್ರದುರ್ಗದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಸಹಾಯಕವಾಗಿದೆ. ಎ.ಡಿ. ಕೃಷ್ಣಯ್ಯರವರ 'ಭಾರತರ ಧೀರ ಮಹಿಳೆ ಚಿತ್ರದುರ್ಗದ ಒನಕೆ ಓಬವ್ವ' ಎಂಬ ಪುಸ್ತಕ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಸಹಕಾರಿಯಾಗಿದೆ.

ಚಿತ್ರದುರ್ಗ ಇತಿಹಾಸವನ್ನು ಕೆಲವು ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ಇಲ್ಲಿಯ ಸಾಂಸ್ಕೃತಿಕ ಹಿನ್ನಲೆಯಲ್ಲಿ ಪ್ರಾಗೈತಿಹಾಸಿಕ ಕಾಲದಿಂದ ಪಾಳಯಗಾರರ ಕಾಲದವರೆಗೆ ಚಿತ್ರಿಸಿದ್ದಾರೆ. ಮೀರಾಸಾಬಿಹಳ್ಳಿ ಶಿವಣ್ಣ, ಹುಲ್ಲೂರು ಜೋಯಿಸ, ಕೆಳದಿ ಗುಂಡಾಜೋಯಿಸ, ಸೂರ್ಯನಾಥ ಕಾಮತ್, ಕಮಲ ಹಂಪನಾ, ಬಿ.ರಾಜಶೇಖರಪ್ಪ, ಲಕ್ಷ್ಮಣತೆಲಗಾವಿ, ಕೆಳದಿ ವೆಂಕಟೇಶ್ ಜೋಯಿಸ, ಎಲ್.ಬಸವರಾಜು, ಎಂ.ವಿ.ಶ್ರೀನಿವಾಸ್, ಎಂ.ಚಿದಾನಂದಮೂರ್ತಿ, ಎಂ.ಎಂ.ಕಲಬುರುಗಿ ಮೊದಲಾದವರು ಬರೆದಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಕುರಿತಂತೆ ಆನೇಕ ಬಿಡಿ ಲೇಖನಗಳನ್ನು ಬರೆದಿದ್ದಾರೆ. ಅವರಲ್ಲಿ ಚಿತ್ರದುರ್ಗದ ನಾಯಕರನ್ನು ಕುರಿತಂತೆ ಎಸ್.ಶ್ರೀಕಂಠಶಾಸ್ತ್ರಿ, ಎಂ.ವಿ.ಶ್ರೀನಿವಾಸ್, ಎಂ.ಚಿದಾನಂದಮೂರ್ತಿ, ಎಂ.ಎಂ.ಕಲಬುರುಗಿ, ಪಿ.ವಿ.ಕೃಷ್ಣಮೂರ್ತಿ, ಎಸ್.ವೈ.ಸೋಮಶೇಖರ್, ತಿಪ್ಪೆಸ್ವಾಮಿ, ಶ್ರೀ ಶೈಲಆರಾಧ್ಯ, ಝಡ್.ಮಹ್ಮದ್ ಜಫರುಲ್ಲಾ, ಮಹಂತೇಶ, ನಾಗರಾಜಪ್ಪ, ಸುರೇಶ, ಜಯಮ್ಮ, ಗುಡ್ಡದೇಶ್ವರಪ್ಪ ಮೊದಲಾದವರ ಬಿಡಿ ಲೇಖನಗಳು ಚಿತ್ರದುರ್ಗದ ಇತಿಹಾಸವನ್ನು ರಚಿಸುವಲ್ಲಿ ಸಹಕಾರಿಯಾಗಿದೆ. ಚಿತ್ರದುರ್ಗದ ಪ್ರೇಕ್ಷಣೀಯ ಸ್ಥಳಗಳನ್ನು ಮಕ್ಕಳಿಗೆ ಹಾಗೂ ಪ್ರವಾಸಿಗರಿಗೆ ತೋರಿಸುವಲ್ಲಿ ಶ್ರೀಧರ ಮೂರ್ತಿಯವರ ಚಿತ್ರದುರ್ಗ ಎಂಬ ಕಿರುಹೊತ್ತಿಗೆ, ಶ್ರೀಪಾಂಡುರಂಗ ಜೋಯಿಸ್, ಕೆ.ಎ ಮಂಜುನಾಥರವರ ಚಿತ್ರದುರ್ಗ ಕೋಟೆಯ ಕಿರುಹೊತ್ತಿಗೆ, ಹು. ಶ್ರೀ ಪಾಂಡುರಂಗ ಜೋಯಿಸ್, ಲಕ್ಷ್ಮಣ ತೆಲಗಾವಿ, ಕೆ ವೆಂಕಣ್ಣಾಚಾರ್ ಇವರು ಒಟ್ಟುಗೂಡಿಸಿ ಸಿದ್ಧಪಡಿಸಿದ 'ಚಿತ್ರದುರ್ಗ ದರ್ಶಿನಿ', ಟಿ. ಗಿರಿಜರವರ ಚಿತ್ರದುರ್ಗ ಜಿಲ್ಲಾದರ್ಶಿನಿ ಇಡೀ ಚಿತ್ರದುರ್ಗ ಜಿಲ್ಲೆಯ ಗ್ರಾಮಗಳ ಇತಿಹಾಸವನ್ನು ನೀಡುವಲ್ಲಿ ಈ ಪುಸ್ತಕ ಪ್ರಮುಖ ಪಾತ್ರ ವಹಿಸುತ್ತದೆ. ಎಸ್.ವೈ.ಸೋಮಶೇಖರರವರ 'ಚಿತ್ರದುರ್ಗ ಜಿಲ್ಲೆಯ ದೇವಾಲಯಗಳು' ಇದು ಚಿತ್ರದುರ್ಗದ ದೇವಾಲಯಗಳ ಕುರಿತು ಸಮಗ್ರ ಮಾಹಿತಿಯನ್ನು ಕಾಲಾನುಕ್ರಮದಲ್ಲಿ ನೀಡುತ್ತದೆ. ಬಿ. ಸುರೇಶರವರ 'ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಯ ದೇವಾಲಯಗಳು', ಈ ಗ್ರಂಥವು ಶಾಸನಗಳಲ್ಲಿ ಉಲ್ಲೇಖವಾಗಿರುವ ದೇವಸ್ಥಾನಗಳನ್ನು ಉಲ್ಲೇಖಿಸುತ್ತದೆ. ಶಂಕರ ಎಸ್ ಅಥಣಿ ಮತ್ತು ಹು. ಶ್ರೀ ಪಾಂಡುರಂಗ ಬರೆದ ಚಿತ್ರದುರ್ಗ ಕೋಟೆಯ ವೈಭವ ಮತ್ತು ಚಿತ್ರದುರ್ಗದ ಏಳುಸುತ್ತಿನ ಕೋಟೆ ಗ್ರಂಥ ಇವು ಚಿತ್ರದುರ್ಗದ ಇತಿಹಾಸವನ್ನು ಪರಿಚಯಿಸುವಲ್ಲಿ ಸಹಕಾರಿಯಾಗಿದೆ. ಚೆನ್ನಬಸಪ್ಪ ಎಸ್ ಪಾಟೀಲ್ ರವರ ಕರ್ನಾಟಕದ ಕೋಟೆಗಳು ಸಂಪುಟ-1 ರಲ್ಲಿ ಚಿತ್ರದುರ್ಗದ ಕೋಟೆಯನ್ನು ಕುರಿತು ಬರೆದಿದ್ದಾರೆ. ಅ. ಸುಂದರವರ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯ ಗ್ರಂಥ, ಹೆಚ್.ಎಸ್ ಗೋಪಾಲ್ ರವರ ಚಿತ್ರದುರ್ಗದ ಪಾಳೆಯಗಾರರು, ಬಿ.ರಾಜಶೇಖರಪ್ಪನವರ ಇತಿಹಾಸ ಕಥನ, ಹೊಸ ಶೋಧ, ನಿರಂತರ, ದುರ್ಗಶೋಧನ, ಪ್ರಾಚೀನ ಚಿತ್ರದುರ್ಗ, ಎಂ.ಎನ್ ಪ್ರಭಾಕರ್ ರವರ ಹರ್ತಿಕೋಟೆಯ ಸ್ಮಾರಕಗಳು, ಹುಲ್ಲೂರು ಶ್ರೀನಿವಾಸ ಜೋಯಿಸರ ಚಿತ್ರದುರ್ಗ ಪತನ, ತಿ.ತಾ ಶರ್ಮಾ ರವರ ಹೈದರ್ ನಾಮಾ-ಚಾರಿತ್ರಿಕ ದಾಖಲೆಗಳು, ರಾಜಾ ಬಿಚ್ಚುಗತ್ತಿ ಪರಶುರಾಮಪ್ಪರ ಚಿತ್ರದುರ್ಗದ ಗಜಕೇಸರಿ, ಬಿ.ಎಸ್ ಶ್ರೀನಿವಾಸ ನಾಯಕರ ಕಾಮಗೇತಿ ಅರಸರು, ಹುಲ್ಲೂರು ಶ್ರೀನಿವಾಸ ಜೊಯಿಸರ ಚಿತ್ರದುರ್ಗದ ಬಖೈರು, ಎಂ.ಜಿ ವೆಂಕಟೇಶಯ್ಯನವರ ಚಿತ್ರದುರ್ಗದ ಪಾಳೆಯಗಾರರು, ಕಮಲಾಹಂಪನಾ ರವರ ವೀರವನಿತೆ ಓಬವ್ವ, ಶ್ರೀಧರಮೂರ್ತಿರವರ ಚಿತ್ರದುರ್ಗ, ಕೆ.ವಿ ಮಂಜುನಾಥರಾಯರ ಸಿದ್ದರದುರ್ಗ(ಲಾವಣಿ ಸಂಗ್ರಹ), ಸಿ. ಆಂಜನೇಯರವರ ಚಿತ್ರದುರ್ಗ ಮನೆತನದ

ವಂಶಾವಳಿ. ಟಿ.ಎನ್ ಗಂಡುಗಲಿಯವರ ಚಿತ್ರದುರ್ಗದ ಖಾಸ ನಾಯಕರ ವಂಶಸ್ಥರು–ಕೆಲವು ಹೊಸ ವಿಚಾರಗಳು, ಇವರ ಟಿ.ಎನ್ ಗಂಡುಗಲಿ ದೇಶದ್ರೋಹಿ ದೊಡ್ಡ ಮದಕರಿನಾಯಕ, ಪಿ.ಕೃಷ್ಣರಾವ್‌ರವರ ಚಿತ್ರದುರ್ಗ ಬೆಟ್ಟ ಮತ್ತು ನಾಯಕ ಸಾಮ್ರಾಜ್ಯ, ಲಕ್ಷ್ಮಣ್ ತೆಲಗಾವಿಯವರ ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನ ವ್ಯಾಪಕತೆ ಮತ್ತು ಸಾಧ್ಯತೆ, ವೇ.ತಿ ಕುಲಕರಣಿ ಗಳಗನಾಥ, ಪಾಂಡವಪುರ ನಾ ಪ್ರಭಾಕರರವರ ಮದಕರಿಯ ನಾಡಲ್ಲಿ ಕಿರುಹೊತ್ತಿಗೆ ಚಿತ್ರದುರ್ಗ ಕುರಿತ ಐತಿಹಾಸಿಕತೆಯನ್ನು ನೀಡುತ್ತದೆ. ಅನೇಕ ಚಿತ್ರದುರ್ಗ ಕುರಿತಾದ ಸ್ಮರಣ ಸಂಚಿಕೆಗಳು ಅದರಲ್ಲಿ ಹರತಿ ಸಿರಿ, ಕರ್ನಾಟಕ ರಾಜ್ಯದ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಚಿತ್ರದುರ್ಗ ಇತಿಹಾಸ ಮತ್ತು ಪುರಾತತ್ವ ಆರ್. ಗೋಪಾಲ್‌ರವರ ಸಂಪಾದಕತ್ವದ ಪುಸ್ತಕವು ನಾಡಿನ ಹೆಸರಾಂತ ವಿದ್ವಾಂಸರಿಂದ ರೂಪುಗೊಂಡಿದ್ದು ಚಿತ್ರದುರ್ಗದ ಇತಿಹಾಸ ರಚಿಸುವಲ್ಲಿ ಕಳಶಪ್ರಾಯವಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿರುವ ದೇವಾಲಯಗಳು, ಕೋಟೆ, ಮಠಗಳು ಜಲಾಶಯಗಳು ಮುಂತಾದವುಗಳನ್ನು ಶ್ರೀ ಪಾಂಡುರಂಗ ಜೋಯಿಸ್‌ರವರು ನಕ್ಷೆಯಲ್ಲಿ ತೋರಿಸಿರುವುದು ಕಾಣಬಹುದು. ಕಾದಂಬರಿ ಆದಾರಿತವಾಗಿ ತರಾಸು ಅವರು ದುರ್ಗದ ಕುರಿತಾಗಿ ನಾಯಕರ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಎಚ್.ವಿ.ವೀರನಾಯಕ, ಬಿ.ಎಲ್ ವೇಣು, ಟಿ ಗಿರಿಜ, ಸುಲೋಚನಾ ಶಾಸ್ತ್ರಿ, ಇವರುಗಳ ಕಾದಂಬರಿ ಆದಾರಿತ ಗ್ರಂಥಗಳು ಪ್ರಮುಖವಾಗಿದೆ.

ಚಿತ್ರದುರ್ಗದ ಪಾಳೆಯಗಾರರನ್ನು ಕುರಿತು ಅನೇಕ ನಾಟಕಗಳು ರಚನೆಯಾಗಿದ್ದು ಮರಡಿಹಳ್ಳಿ ಪಿ.ಸೀತಾರಾಮರೆಡ್ಡಿಯವರು ಕೊನೆಯ ಮದಕರಿನಾಯಕನನ್ನು ಕುರಿತು ಬರೆದ ನಾಟಕ ಪ್ರಮುಖವಾದದ್ದು. ತ.ರಾ.ಸು.ರವರ ದುರ್ಗಾಸ್ತಮಾನ ಕಾದಂಬರಿ ಆಧರಿಸಿ ಅನೇಕ ನಾಟಕಗಳು ಪ್ರದರ್ಶನಗೊಂಡಿವೆ. ಬಿ.ಎಲ್ ವೇಣುರವರು ಅನೇಕ ಕಾದಂಬರಿಗಳು ನಾಟಕ ಚಲನ ಚಿತ್ರಗಳಾಗಿ ರಚನೆಯಾಗಿವೆ. ಅದರಲ್ಲಿ ಕಲ್ಲರಳಿ ಹೂವಾಗಿ ಹಾಗೂ ತ.ರಾ.ಸು.ರವರ ನಾಗರಹಾವು ಚಲನಚಿತ್ರ ಪ್ರಮುಖವಾದವು. ಚಿತ್ರದುರ್ಗ ಕುರಿತಂತೆ ಅನೇಕ ಕಲಾವಿದರು ಚಿತ್ರಗಳನ್ನು ಬಿಡಿಸಿದ್ದಾರೆ ಅದರಲ್ಲಿ ಪಿ.ಆರ್ ತಿಪ್ಪೆಸ್ವಾಮಿ, ಎಸ್ ನಂಜುಂಡಸ್ವಾಮಿ, ಜಿ.ಕೆ ಸತ್ಯ, ಕೆ.ಚೆನ್ನಬಸಪ್ಪ, ಬಿ.ವೈ. ಹುಬ್ಳೀಕರ್ ಇವು ಚಿತ್ರದುರ್ಗದ ವೈಭವವನ್ನು ಚಿತ್ರಗಳ ಮೂಲಕ ಚಿತ್ತಾರದಲ್ಲಿ ಮೂಡಿಸಿದ್ದಾರೆ. ಚಿತ್ರದುರ್ಗ ಚರಿತ್ರೆಗೆ ಸಂಬಂಧಿಸಿದಂತೆ ಚಿತ್ರದುರ್ಗವನ್ನಾಳಿದ ಅನೇಕ ಚಾರಿತ್ರಿಕ ವ್ಯಕ್ತಿಗಳನ್ನು ಹಿನ್ನಲೆಯಲ್ಲಿಟ್ಟುಕೊಂಡು ಚಲನಚಿತ್ರಗಳು ಬಂದಿವೆ. ಅವುಗಳಲ್ಲಿ ಮೊದಲು ತ.ರಾ.ಸು.ರವರ ಹಂಸಗೀತೆ ಕಾದಂಬರಿ ಆಧಾರಿತ ಬಸಂತ್ ಬಿಹಾರ್ ಎಂಬ ಹೆಸರಿನ ಹಿಂದಿ ಚಲನಚಿತ್ರ ದುರ್ಗದ ಹೆಸರು ಭಾರತದಾದ್ಯಂತ ಪರಿಚಿತವಾಗಲು ಕಾರಣವಾಯಿತು. ನಾಗರಹಾವು ಚಲನಚಿತ್ರ ಚಿತ್ರದುರ್ಗದ ಇತಿಹಾಸವನ್ನು ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ದುರ್ಗದ ಬಿಚ್ಚುಗತ್ತಿ ತ.ರಾ.ಸು.ರವರ ದುರ್ಗಸ್ತಮಾನ, ಕಸ್ತೂರಿ ಕಂಕಣ, ಕಂಬನಿಯ ಕುಯಿಲು, ರಾಜ್ಯದಾಹ, ರಕ್ತರಾತ್ರಿ, ತಿರುಗುಬಾಣ ಇವುಗಳು ಚಿತ್ರದುರ್ಗ ಜಿಲ್ಲೆಯ ಕುರಿತು ಬಂದಿರುವ ಸಂಶೋಧನಾ ಗ್ರಂಥಗಳಾಗಿವೆ.

ಮೇಲಿನ ಅಧ್ಯಯನಗಳು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ನಡೆದಿದ್ದು, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಗೋಳಕ್ಕೆ ಹೆಚ್ಚು ಒತ್ತು ನೀಡದಿರುವುದರಿಂದ, ಇವುಗಳಿಗೆ ಭಿನ್ನವಾಗಿ ಈ ಪ್ರಬಂಧದಲ್ಲಿ ಚಿತ್ರದುರ್ಗ ಜಿಲ್ಲೆಯು ಹೇಗೆ ಕಾಲಾಂತರದಲ್ಲಿ ಮಾರ್ಪಾಟಾಯಿತೆಂಬುದನ್ನು ಅಧ್ಯಯನ ಮಾಡಲಾಗಿದೆ.

ಆಕರಗಳು:

ಇತಿಹಾಸ ರಚನೆಗೆ ಆಧಾರಗಳು ಮೂಲಾಂಶಗಳಾಗಿವೆ. ಆಧಾರ ರಹಿತ ಇತಿಹಾಸ ರಚನೆ ಅಸಾಧ್ಯವಾದುದು. ಇಂತಹ ಆಧಾರಗಳಲ್ಲಿ ಪ್ರಮುಖವಾಗಿ ನಾವು ಎರಡು ಪ್ರಕಾರಗಳನ್ನು ಗುರುತಿಸಬಹುದಾಗಿದೆ. ಅವುಗಳೆಂದರೆ ಪ್ರಾಥಮಿಕ ಮತ್ತು ಅನುಷಂಗಿಕ ಆಧಾರಗಳು. ಇವುಗಳಲ್ಲಿ ಪ್ರಾಥಮಿಕ ಆಕರಗಳು ಪ್ರಮುಖವಾಗಿ ಇತಿಹಾಸ ರಚನೆಯನ್ನು ಸದೃಢಗೊಳಿಸಿವೆ. ಪ್ರಮುಖ ಆಧಾರಗಳಲ್ಲಿ ಶಾಸನಗಳು, ಸಮಕಾಲೀನ ಕೃತಿಗಳು, ಸ್ಮಾರಕಗಳು, ನಾಣ್ಯಗಳೂ ಮುಖ್ಯವಾದವುಗಳಾಗಿವೆ. ಆಯಾಯ ಕಾಲಘಟ್ಟಗಳಲ್ಲಿ ರಚಿತಗೊಂಡ ಸಾಹಿತ್ಯ, ಐತಿಹ್ಯಗಳು, ಸ್ಥಳಪುರಾಣಗಳು, ಜಾನಪದ ಆರಾಧನೆ, ಆಚರಣೆಗಳು, ಸ್ಥಳೀಯ ಹಾಗೂ ವಿದೇಶಿ ಬರಹಗಳು ಇವೆಲ್ಲಾ ಆಕರಗಳೂ ಸಂಶೋಧಕನಿಗೆ ನೆರವಾಗಿವೆ.

ಪ್ರಾಥಮಿಕ ಆಕರಗಳು.

ಶಾಸನಗಳು:

ಸಂಶೋಧನಾ ವಿಧಾನದಲ್ಲಿ ಶಾಸನಗಳು ಪ್ರಾಥಮಿಕ ಆಕರಗಳಾಗಿ ಪ್ರಮುಖ ಪಾತ್ರವಹಿಸುತ್ತವೆ. ಇವುಗಳು ಪುರಾತತ್ವ ಅಧ್ಯಯನದಲ್ಲಿ ಪ್ರಮುಖ ಆಕರಗಳಾಗಿ ಗುರುತಿಸಿಕೊಂಡಿದ್ದು, ಇವು ಮೊದಲು ಪುರಾತತ್ವ ಇಲಾಖೆಯಡಿ ಅಧ್ಯಯನವಾಗಿ ನಂತರ ಶಾಸನವನ್ನು ಓದುವ ಅಭಿರುಚಿ ಬೆಳಸಿಕೊಂಡ ವಿದ್ವಾಂಸರು ಭಾರತೀಯ ಇತಿಹಾಸವನ್ನು ವ್ಯವಸ್ಥಿತವಾಗಿ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿವೆ. ಶಾಸನಗಳನ್ನು ಪ್ರಮುಖವಾಗಿ ಲಿಖಿತವಾಗಿ ಒಂದು ಕಾಲದಲ್ಲಿ ನಡೆದ ಘಟನೆಗಳನ್ನು ಲಿಪಿ ರೂಪದಲ್ಲಿ ಖಂಡರಿಸಲಾಗಿದೆ. ಇವು ಮೊದಲು ಬ್ರಾಹ್ಮಿ ಲಿಪಿಯಲ್ಲಿದ್ದು, ಪ್ರಾಕೃತ, ಸಂಸ್ಕೃತ, ಕನ್ನಡ, ತಮಿಳು ಹಾಗೂ ತೆಲಗು ಭಾಷೆಯಲ್ಲಿ ರಚಿತವಾಗಿದ್ದು ಇವುಗಳನ್ನು ಕಲ್ಲುಗಳು, ತಾಮ್ರಪಟ, ಹಸ್ತಪ್ರತಿ, ತಾಳೆಗರಿ, ಕಡತ ಮೊದಲಾದುವುಗಳಲ್ಲಿ ದಾಖಾಲಾಗಿರುವುದನ್ನು ಕಾಣಬಹುದು. ಒಂದು ನಾಡಿನ ರಾಜಕೀಯ ಸಾಂಸ್ಕೃತಿಕ ಇತಿಹಾಸವನ್ನು ಪುನರ್ ರಚಿಸುವಲ್ಲಿ ಇವು ಸಹಕಾರಿಯಾಗಿವೆ. ಇದರಿಂದ ಈ ನಾಡಿನ ಶೈಕ್ಷಣಿಕತೆಯಲ್ಲಿ ಅವರ ಅಕ್ಷರಸ್ತ ಸಮಾಜವನ್ನು ಗುರುತಿಸುವಲ್ಲಿ ಸಾಧ್ಯವಾಗುತ್ತದೆ. ಪ್ರಸ್ತುತ ಸಂಶೋಧನ ಮಹಾ ಪ್ರಬಂಧದಲ್ಲಿ ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಎಪಿಗ್ರಾಫಿಯಾ ಕರ್ನಾಟಿಕ-11 ರ ಸಂಪುಟದಲ್ಲಿ ಕ್ರಿ.ಪೂ. 3ನೇ ಶತಮಾನದ ಮೌರ್ಯರ ಅಳ್ವಿಕೆಯಿಂದ ಕ್ರಿ.ಶ. 18ನೇ ಶತಮಾನದ ಪಾಳೆಯಗಾರರ ಅವನತಿಯವರೆಗೆ ಶಾಸನಗಳ ಬರವಣಿಗೆಗಳನ್ನು ಅಧ್ಯಯನದ ಪ್ರಮುಖ ಪ್ರಾಥಮಿಕ ಆಕರಗಳಾಗಿ ಬಳಸಿಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ ಅಧ್ಯಯನ ಪ್ರದೇಶದಲ್ಲಿ ಅಪ್ರಕಟಿತ ಶಾಸನಗಳನ್ನು ಹಾಗೂ ಶಿಲ್ಪಗಳನ್ನು ಪತ್ತೆ ಮಾಡುವುದರ ಮೂಲಕ ಅವುಗಳ ನೆರವನ್ನು ಪಡೆಯಲಾಗಿದೆ.

ಸ್ಮಾರಕಗಳು:

ಸ್ಮಾರಕಗಳು ಪ್ರಾದೇಶಿಕ ಇತಿಹಾಸವನ್ನು ಕಟ್ಟುವಲ್ಲಿ ತುಂಬಾ ಸಹಕಾರಿಯಾಗಿವೆ. ಪ್ರಾಚೀನ ಕಾಲದಿಂದಲೂ ಬೃಹತ್ ಶಿಲಾಯುಗದ ಸಮಾಧಿಗಳು, ದೇವಾಲಯಗಳು, ಬಸದಿಗಳು, ಕೆರೆಕಾಲುವೆಗಳು, ವೀರಗಲ್ಲು ಮಾಸ್ತಿಗಲ್ಲುಗಳು, ಕೋಟೆ ಕೊತ್ತಲುಗಳನ್ನು ಅಸಂಖ್ಯತವಾಗಿ ನಿರ್ಮಿಸಿರುವುದರಿಂದ ಇವು ಅಂದಿನ ಕಾಲದಿಂದ ಉಳಿದು ಬಂದಿದ್ದು, ಈ ಪ್ರದೇಶದಲ್ಲಿ ಅಳ್ವಿಕೆ ಮಾಡಿದಂತಹ ರಾಜಮನೆತನಗಳಾದ ಮೌರ್ಯರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ನೊಳಂಬರು, ಸೇವುಣರು, ಹೊಯ್ಸಳರು, ವಿಜಯನಗರದ ಅರಸರು, ಚಿತ್ರದುರ್ಗದ ಪಾಳೆಯಗಾರರು, ಹರತಿಯ ಪಾಳೆಗಾರರು, ನಾಯಕನಹಟ್ಟಿ ಪಾಳೆಯಗಾರರು, ಬೂದಿಹಾಳಿನ ಪಾಳೆಯಗಾರರು,

ಮತೋಡು ಪಾಳೆಯಗಾರರು, ರಾಯದುರ್ಗದ ಪಾಳೆಯಗಾರರ ಇತಿಹಾಸವನ್ನು ಮರುಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

ನಾಣ್ಯಗಳು:

ನಾಣ್ಯಗಳು ಇತಿಹಾಸವನ್ನು ಸೃಷ್ಟಿಸುವಲ್ಲಿ ಹಾಗೂ ಅಂದಿನ ಸಂಸ್ಕೃತಿ, ಚರಿತ್ರೆ ಹಾಗೂ ಆರ್ಥಿಕತೆ ಅದರ ಸ್ಥಿತಿಗತಿಯನ್ನು ಅರಿಯುವಲ್ಲಿ ಸಹಕಾರಿಯಾಗಿವೆ. ನಾಣ್ಯಗಳನ್ನು ವ್ಯವಹಾರಕ್ಕಾಗಿ ಅದರಲ್ಲೂ ಹೆಚ್ಚಾಗಿ ವಿದೇಶಿ ವ್ಯಾಪಾರಕ್ಕಾಗಿ ಅಥವಾ ಐಷಾರಾಮಿ ವಸ್ತುಗಳನ್ನು ಕೊಳ್ಳಲು ಬಳಸಲಾಗಿತ್ತು. ವ್ಯವಹಾರವು ವಸ್ತುವಿನಿಮಯ ಪದ್ಧತಿಯಿಂದ ಆರಂಭವಾಗಿ ನಂತರ ರಾಜ್ಯ ರಚನೆಯೊಂದಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಇವುಗಳನ್ನು ತಯಾರು ಮಾಡುವ ವಸ್ತುಗಳು ಅಂದರೆ ಲೋಹಗಳ ಆಧಾರದ ಮೇಲೆ ಒಂದು ರಾಜ್ಯದ ಆಡಳಿತ, ರಾಜಕೀಯ, ಆರ್ಥಿಕ, ಸಾಮಾಜಿಕ ಇತಿಹಾಸವನ್ನು ಕಟ್ಟುವಲ್ಲಿ ಸಹಕಾರಿಯಾಗಿವೆ. ನಾಣ್ಯಗಳ ಬಳಕೆ ಮಾಡದ ಸಾಮ್ರಾಜ್ಯವನ್ನು ಊಹಿಸಿಕೊಳ್ಳುವುದು ಕಷ್ಟವೆನ್ನಬಹುದು. ಭಾರತೀಯ ನಾಣ್ಯ ಪರಂಪರೆಯು ಬಹಳ ವಿಶಾಲವಾಗಿದ್ದು ಅವುಗಳ ತಯಾರಿಕ ಘಟಕದಿಂದ ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಆದ್ದರಿಂದ ಪ್ರಸ್ತುತ ಪ್ರಬಂಧದಲ್ಲಿ ಚಿತ್ರದುರ್ಗ ಜಿಲ್ಲೆಯ ಪ್ರದೇಶದಲ್ಲಿ ಆಳ್ವಿಕೆ ಮಾಡಿರುವ ರಾಜಮನೆತನಗಳ ನಾಣ್ಯಗಳು ಆಗಿನ ಕಾಲದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಭೂಗೋಳವನ್ನು ತಿಳಿಯಲು ತುಂಬಾ ಸಹಕಾರಿಯಾಗಿದ್ದು ಇವುಗಳನ್ನು ಬಳಸಿಕೊಳ್ಳಲಾಗಿದೆ.

ಉತ್ಖನನ ವರದಿಗಳು :

ಚಿತ್ರದುರ್ಗ ಜಿಲ್ಲೆಯ ಚಂದ್ರವಳ್ಳಿ, ಬ್ರಹ್ಮಗಿರಿ ಹಾಗೂ ಕೊಮರನಹಳ್ಳಿಯಲ್ಲಿ ಉತ್ಖನನಗೊಂಡ ಉತ್ಖನನ ವರದಿಗಳು ಚಿತ್ರದುರ್ಗದ ಇತಿಹಾಸ ಪುನರ್ ರಚಿಸುವಲ್ಲಿ ಸಹಕಾರಿಯಾಗಿವೆ.

ಅನುಷಂಗಿಕ ಆಕರಗಳು:

ಇತಿಹಾಸದ ಅಧ್ಯಯನವನ್ನು ಕೈಗೊಳ್ಳಲು ಮುಖ್ಯವಾಗಿ ಇರುವ ಆಧಾರಗಳಲ್ಲಿ ಅನುಷಂಗಿಕ ಆಕರಗಳು ತುಂಬಾ ಮಹತ್ವದ್ದಾಗಿವೆ. 1924ರಲ್ಲಿ ಎಂ.ಎಸ್. ಪುಟ್ಟಣ್ಣನವರ "ಚಿತ್ರದುರ್ಗದ ಪಾಳೆಯಗಾರರು" ಎಂಬ ಗ್ರಂಥ, 1967ರಲ್ಲಿ ಬಿ.ಎನ್. ಸತ್ಯನ್‌ರವರು ಮೈಸೂರು ಗೆಜೆಟಿಯರ್ ಸಂಪುಟದಲ್ಲಿನ "ಚಿತ್ರದುರ್ಗ ಡಿಸ್ಟ್ರಿಕ್ಟ್ ಗೆಜೆಟಿಯರ್" ಗ್ರಂಥ, ಕರ್ನಲ್ ಮೆಕೆನ್ಜಿಯವರ ಕೈಫಿಯತ್‌ಗಳನ್ನು ಆಧರಿಸಿ ಬಂದ "ಕರ್ನಾಟಕ ಕೈಫಿಯತ್ತುಗಳು" ಗ್ರಂಥ, 1976ರಲ್ಲಿ ಲಕ್ಷ್ಮಣ್ ತೆಲಗಾವಿ ಮತ್ತು ಎಂ. ವಿ. ಶ್ರೀನಿವಾಸ್ ಸಂಪಾದಿಸಿದ 'ಜೋಯಿಸರ ಐತಿಹಾಸಿಕ ಲೇಖನಗಳು ಹಾಗೂ ಹಲ್ಲೂರು ಶ್ರೀನಿವಾಸ್ ಜೋಯಿಸರ ಸಂಶೋಧನ ಲೇಖನಗಳು' ಎಂಬ ಎರಡು ಸಂಪುಟಗಳು, ಜಿ.ಎನ್. ಸಾಲತ್ತೊರೆಯವರು ಮಿಥಿಕ್ ಸೊಸೈಟಿಯ ತ್ರೈಮಾಸಿಕದಲ್ಲಿ ಪ್ರಕಟಿಸಿದ ಲೇಖನಗಳು, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮಂಡಲಿ, ಎಂ.ವಿ. ಶ್ರೀನಿವಾಸ್ ಮತ್ತು ಲಕ್ಷ್ಮಣ್ ತೆಲಗಾವಿ ಇವರ ಸಂಪಾದಕತ್ವದ ಚಂದ್ರವಳ್ಳಿ ಎಂಬ ಗ್ರಂಥ, ಎ.ಡಿ. ಕೃಷ್ಣಯ್ಯರವರ 'ಭಾರತದ ಧೀರ ಮಹಿಳೆ ಚಿತ್ರದುರ್ಗದ ಒನಕೆ ಓಬವ್ವ' ಪುಸ್ತಕ, ಶ್ರೀಧರಮೂರ್ತಿಯವರ ಚಿತ್ರದುರ್ಗ, ಶ್ರೀಪಾಂಡುರಂಗ ಜೋಯಿಸ್ ಹಾಗೂ ಮಂಜುನಾಥರವರ ಚಿತ್ರದುರ್ಗ ಕೋಟೆಯ ಕಿರುಹೊತ್ತಿಗೆ, ಹು. ಶ್ರೀ ಪಾಂಡುರಂಗ ಜೋಯಿಸ್, ಲಕ್ಷ್ಮಣ ತೆಲಗಾವಿ, ಕೆ ವೆಂಕಣ್ಣಾಚಾರ್ ಇವರು ಒಟ್ಟುಗೂಡಿಸಿ ಸಿದ್ಧಪಡಿಸಿದ ಚಿತ್ರದುರ್ಗ ದರ್ಶಿನಿ, ಟಿ. ಗಿರಿಜರವರ ಚಿತ್ರದುರ್ಗ

ಜಿಲ್ಲಾದರ್ಶಿನಿ, ಎಸ್. ವೈ.ಸೋಮಶೇಖರರವರು ಚಿತ್ರದುರ್ಗ ಜಿಲ್ಲೆಯ ದೇವಾಲಯಗಳು, ಬಿ.ಸುರೇಶರವರ ಚಿತ್ರದುರ್ಗ ಹಾಗೂ ದಾವಣಗೆರೆ ಜಿಲ್ಲೆಯ ದೇವಾಲಯಗಳ ಗ್ರಂಥ, ಶಂಕರ. ಎಸ್ ಅಥಣಿ ಮತ್ತು ಹು.ಶ್ರೀ ಪಾಂಡುರಂಗ ಬರೆದ ಚಿತ್ರದುರ್ಗ ಕೋಟೆಯ ವೈಭವ ಮತ್ತು ಚಿತ್ರದುರ್ಗದ ಏಳುಸುತ್ತಿನ ಕೋಟೆ ಗ್ರಂಥ, ಚೆನ್ನಬಸಪ್ಪ ಎಸ್ ಪಾಟೀಲ್‌ರವರ ಕರ್ನಾಟಕದ ಕೋಟೆಗಳು ಸಂಪುಟ–1, ಅ.ಸುಂದರವರ ಬ್ರಹ್ಮಗಿರಿ ಮತ್ತು ಚಂದ್ರವಳ್ಳಿಯ ಗ್ರಂಥ, ಹೆಚ್.ಎಸ್ ಗೋಪಾಲ್ ರವರ ಚಿತ್ರದುರ್ಗದ ಪಾಳೆಯಗಾರರು, ಬಿ.ರಾಜಶೇಖರಪ್ಪನವರ ಇತಿಹಾಸ ಕಥನ, ಹೊಸ ಶೋಧ, ನಿರಂತರ, ದುರ್ಗಶೋಧನ, ಪ್ರಾಚೀನ ಚಿತ್ರದುರ್ಗ, ಎಂ.ಎನ್ ಪ್ರಭಾಕರ್ ರವರ ಹರ್ತಿಕೋಟೆಯ ಸ್ಮಾರಕಗಳು, ಹುಲ್ಲೂರು ಶ್ರೀನಿವಾಸರಾಯರ ಚಿತ್ರದುರ್ಗ ಪತನ, ತಿ.ತಾ ಶರ್ಮಾ ರವರ ಹೈದರ್ ನಾಮಾ–ಚಾರಿತ್ರಿಕ ದಾಖಲೆಗಳು, ರಾಜಾ ಬಿಚ್ಚುಗತ್ತಿ ಪರಶುರಾಮಪುರದ ಚಿತ್ರದುರ್ಗದ ಗಜಕೇಸರಿ, ಬಿ.ಎಸ್ ಶ್ರೀನಿವಾಸನಾಯಕರ ಕಾಮಗೇತಿ ಅರಸರು ಹುಲ್ಲೂರು ಶ್ರೀನಿವಾಸ ಜೋಯಿಸರ ಚಿತ್ರದುರ್ಗದ ಬಖೈರು, ಎಂ.ಜಿ. ವೆಂಕಟೇಶಯ್ಯನವರ ಚಿತ್ರದುರ್ಗದ ಪಾಳೆಯಗಾರರು, ಕಮಲಾಹಂಪನಾ ರವರ ವೀರವನಿತೆ ಓಬವ್ವ, ಶ್ರೀಧರಮೂರ್ತಿರವರ ಚಿತ್ರದುರ್ಗ, ಕೆ.ವಿ.ಮಂಜುನಾಥರಾಯರ ಸಿದ್ದರದುರ್ಗ(ಲಾವಣಿ ಸಂಗ್ರಹ), ಸಿ ಆಂಜನೇಯರವರ ಚಿತ್ರದುರ್ಗ ಮನೆತನದ ವಂಶಾವಳಿ, ಟಿ.ಎನ್. ಗಂಡುಗಲಿಯವರ ಚಿತ್ರದುರ್ಗದ ಖಾಸ ನಾಯಕರ ವಂಶಸ್ಥರು–ಕೆಲವು ಹೊಸ ವಿಚಾರಗಳು, ಇವರ ಟಿ.ಎನ್ ಗಂಡುಗಲಿ ದೇಶದ್ರೋಹಿ ದೊಡ್ಡ ಮದಕರಿನಾಯಕ, ಪಿ.ಕೃಷ್ಣರಾವ್‌ರವರ ಚಿತ್ರದುರ್ಗ ಬೆಟ್ಟ ಮತ್ತು ನಾಯಕ ಸಾಮ್ರಾಜ್ಯ, ಲಕ್ಷ್ಮಣ್ ತೆಲಗಾವಿಯವರ ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನ ವ್ಯಾಪಕತೆ ಮತ್ತು ಸಾಧ್ಯತೆ, ವೇ.ತಿ ಕುಲಕರಣಿ ಗಳಗನಾಥ, ಪಾಂಡವಪುರ ನಾ ಪ್ರಭಾಕರರವರ ಮದಕರಿಯನಾಡಲ್ಲಿ ಕಿರುಹೊತ್ತಿಗೆ, ಹರತಿ ಸಿರಿ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಮೊದಲಾದವುಗಳು ಅನುಷಾಂಗಿಕ ಆಕರಗಳಾಗಿ ನನ್ನ ಪ್ರಂಬಂಧ ರಚಿಸುವಲ್ಲಿ ಸಹಕರಿಯಾಗಿವೆ. ಹಾಗೂ ತಿಳಿಯಲು ನನ್ನ ಸಂಶೋಧನೆಗೆ ತುಂಬಾ ನೆರವಾಗಿದೆ.

ಫಲಿತಗಳು:

1. ಪೂರ್ವ ಇತಿಹಾಸ ಕಾಲದಲ್ಲಿ ಆದಿಶಿಲಾಯುಗದ ಮೂರು(3) ನೆಲೆಗಳು, ಮಧ್ಯ ಹಳೆಯ ಶಿಲಾಯುಗದ ಒಂದು(1) ನೆಲೆ, ಅಂತ್ಯ ಹಳೆಶಿಲಾಯುಗದ ಒಂದು(1) ನೆಲೆ, ಸೂಕ್ಷ್ಮ ಶಿಲಾಯುಗದ ಇಪ್ಪತ್ತೊಂದು(21) ನೆಲೆಗಳು, ನೂತನ ಶಿಲಾಯುಗದ ನೂರಹನ್ನೆರಡು(112) ನೆಲೆಗಳು, ತಾಮ್ರ ಶಿಲಾಯುಗದ ಇಪ್ಪತ್ತನಾಲ್ಕು(23) ನೆಲೆಗಳು, ಬೃಹತ್ ಶಿಲಾಯುಗದ ಐವತ್ತಾರು(137) ನೆಲೆಗಳು ಕಂಡುಬಂದಿದ್ದು ಇದರಿಂದ ಒಂದು ಕಾಲದಿಂದ ಇನ್ನೊಂದು ಕಾಲದಲ್ಲಿ ಅಂದರೆ ಕಾಲಘಟ್ಟದಲ್ಲಿ ಜನವಸತಿ ಹೆಚ್ಚಾಗಿರುವುದು ಕಂಡುಬರುತ್ತದೆ. ಈ ನೆಲೆಗಳೆಲ್ಲವು ನೀರಿನ ಸೆಲೆಯಿರುವ ಹಳ್ಳ, ತೊರೆ, ನದಿ ಪಾತ್ರಗಳಲ್ಲಿ ಹಾಗೂ ಗವಿಗಳಲ್ಲಿ ಕಂಡುಬಂದಿರುವುದು ಇಲ್ಲಿಯೇ ಈ ಕಾಲಗಳಿಗೆ ಸಂಬಂಧಿಸಿದ ಅವಶೇಷಗಳು ಕಂಡುಬಂದಿರುವುದು ಪ್ರಮುಖವಾಗಿದೆ.

2. ಇತಿಹಾಸ ಆರಂಭ ಕಾಲದಲ್ಲಿ ಸುಮಾರು 34 ನೆಲೆಗಳು ಕಂಡುಬಂದಿವೆ. ಇಲ್ಲಿ ಲಿಪಿಯ ಹಾಗೂ ಮಾನವನ ಬಾಷೆಯ ಬಳಕೆಯನ್ನು ಕಾಣಬಹುದು. ಇಲ್ಲಿ ಪ್ರಮುಖವಾಗಿ ನಂದರು, ಮೌರ್ಯರು, ಚುಟುಗಳು ಹಾಗೂ ಮಹಾರಥಿಗಳ ಕಾಲವು ಇತಿಹಾಸ ಆರಂಭ ಕಾಲದ ಸಮೀಕರಣದಲ್ಲಿ ಕಂಡುಬರುತ್ತದೆ. ಈ ಹಂತದಲ್ಲಿ ವಸ್ತು ವಿನಿಮಯ ಬಿಟ್ಟು ನಾಣ್ಯಗಳ ಬಳಕೆ ಮಾಡಿರುವುದು ವಿಶೇಷವಾಗಿದೆ. ವಿಶೇಷವಾಗಿ ಮೌರ್ಯರ ಕಾಲದ ನೆಲೆಗಳಾದ ಬ್ರಹ್ಮಗಿರಿ, ಜಟಿಂಗ ರಾಮೇಶ್ವರ, ಸಿದ್ಧಾಪುರ ಹಾಗೂ ಚಂದ್ರವಳ್ಳಿ ಪ್ರಮುಖವಾದವುಗಳಾಗಿವೆ. ಮೌರ್ಯ ದೊರೆ ಅಶೋಕನು ತನ್ನ ಆಡಳಿತಾವಧಿಯಲ್ಲಿ ತನ್ನ ದಕ್ಷಿಣ ಭಾರತದ ಆಡಳಿತ ಕೇಂದ್ರವನ್ನು ಈ ಪ್ರದೇಶದಲ್ಲಿ ಸ್ಥಾಪಿಸಿರುವುದು ಗಮನಾರ್ಹ. ಮೌರ್ಯರ ನಂತರ ಅಧಿಕಾರಕ್ಕೆ ಬಂದ ಶಾತವಾಹನರ ನೆಲೆಗಳು ಕಡಿಮೆ ಸಂಖ್ಯೆಯಲ್ಲಿವೆ, ಕಾರಣ ಅವರು ಕರ್ನಾಟಕದ ಮೇಲೆ ನೇರ ಹತ್ತೋಟಿ ಹೊಂದದೇ ಸಾಮಂತರ ಮುಂಖಾತರ ಆಡಳಿತ ನೆಡೆಸಿರುವುದು. ಇವರು ರೋಮ್ ಹಾಗೂ ಚೀನಾದೊಂದಿಗೆ ವ್ಯಾಪಾರ ಸಂಪರ್ಕ ಹೊಂದಿರುವುದಕ್ಕೆ ಚಂದ್ರವಳ್ಳಿಯಲ್ಲಿ ದೊರೆತ ನಾಣ್ಯಗಳೇ ಸಾಕ್ಷಿಗಳಾಗಿವೆ. ಸಾ.ಶ. 4ನೇ ಶತಮಾನದಿಂದ 30 ಆಡಳಿತ ವಿಭಾಗಗಳು ಕಂಡುಬಂದಿವೆ. ಅವುಗಳಲ್ಲಿ ನೊಳಂಬವಾಡಿ, ನೊಳಂಬಳಿಗೆ–1,000 ನೀರ್ಗುಂದನಾಡು, ನೊಳಂಬವಾಡಿ–32,000, ಕದಂಬಳಿಗೆ–1.000, ಸೂಳ್ಗಲ್–70 ಮೊದಲಾದ ಆಡಳಿತ ವಿಭಾಗಗಳಿ ಪ್ರಮುಖವಾಗಿವೆ. 30 ಆಡಳಿತ ವಿಭಾಗಗಳಲ್ಲಿ 151 ನೆಲೆಗಳು, 16 ವ್ಯಾಪಾರಿ ನೆಲೆಗಳು ಅಂದರೆ ಉಪ ವಿಭಾಗಗಳೇ ವ್ಯಾಪಾರ ಕೇಂದ್ರಗಳಾಗಿವೆ. ಹಾಗೂ 90ಕ್ಕೂ ಅಧಿಕ ಸಾಂಸ್ಕೃತಿಕ ನೆಲೆಗಳು, 22ಕ್ಕೂ ಅಧಿಕ ನೀರಿನ ಮೂಲಗಳು ಕಂಡುಬಂದಿವೆ. ಮೌರ್ಯರು ಹಾಗೂ ಶಾತವಾಹನರ ಕಾಲದಲ್ಲಿ ಬೌದ್ಧಧರ್ಮದ ಏಳಿಗೆ ಹಾಗೂ ಸಾ.ಶ. 4ನೇ ಶತಮಾನದದಲ್ಲಿ ಬೌದ್ಧಧರ್ಮದ ಅವನತಿ ಹಾಗೂ ಶೈವ ಮತ್ತು ವೈಷ್ಣವ ಧರ್ಮದ ಏಳಿಗೆ, ದೇವಾಲಯಗಳ ನಿರ್ಮಾಣ ಹಾಗೂ ಜೀರ್ಣೋದ್ಧಾರ ಮಾಡಿರುವುದು ಕಂಡುಬರುತ್ತದೆ. ಜೈನ್ಯ ಧರ್ಮದ ಬೆಳವಣಿಗೆಯಿದ್ದು ಬಸದಿಗಳ ನಿರ್ಮಾಣವಾಗಿವೆ. ಸಾ.ಶ. 9ನೇ ಶತಮಾನದಲ್ಲಿಯೇ ವೇಶ್ಯಾವೃತ್ತಿ, ಸತಿಸಹಗಮನ ಪದ್ಧತಿ ಹಾಗೂ ರಾಜನಿಗೋಸ್ಕರ ಆತ್ಮರ್ಪಾಣೆ(ಕಿಳ್ಗುಂಟೆ) ಮಾಡಿಕೊಳ್ಳುವಂತಹ ಪದ್ಧತಿಗಳಿರುವುದು ತಿಳಿದುಬರುತ್ತದೆ.

3. ಸಾ.ಶ. 11ನೇ ಶತಮಾನದಿಂದ 14ನೇ ಶತಮಾನದಲ್ಲಿ ಕದಂಬ, ರಾಷ್ಟ್ರಕೂಟ, ಗಂಗ, ನೊಳಂಬ, ಪಲ್ಲವ, ಉಚ್ಚಂಗಿ ಪಾಂಡ್ಯ, ಕಲ್ಯಾಣ ಚಾಲುಕ್ಯ, ಚೋಳ, ಸಿಂಧ, ಸೇವುಣ, ಕಲಚೂರಿ ಹಾಗೂ ಹೊಯ್ಸಳ ಅರಸರ ಆಡಳಿತವು ಕಂಡುಬಂದಿದ್ದು. ಇವರ ಆಡಳಿತದಲ್ಲಿ ನೊಳಂಬವಾಡಿ–32,000 ವಿಭಾಗವು ಪ್ರಮುಖವಾಗಿದ್ದು, ಇದರಲ್ಲಿ 44 ಉಪ ಆಡಳಿತ ವಿಭಾಗಗಳು ಕಂಡುಬರುತ್ತವೆ ಅವುಗಳಲ್ಲಿ ಕದಂಬಳಿಗೆ ಸಾಸಿರ ಹಾಗೂ ಇದರಲ್ಲಿನ ಉಪ ವಿಭಾಗಗಳಾದ ಬೆಳ್ತೂರು–12, ಬಾಡ–56, ಕುನ್ನೂರು–70, ಮಲೆ–70, ಹೊನ್ನುಂದ–30, ಅತ್ತಿಗೇರಿ–12, ಕುಕ್ಕವಾಡಿ–300 ಮೊದಲಾದ ವಿಭಾಗಗಳಿವೆ. ಈ 44 ಆಡಳಿತ ವಿಭಾಗಗಳಲ್ಲಿ ಸುಮಾರು 154 ನೆಲೆಗಳು, 100ಕ್ಕೂ ಅಧಿಕ ಸಾಂಸ್ಕೃತಿಕ ನೆಲೆಗಳು, 42ಕ್ಕೂ ಅಧಿಕ ವ್ಯಾಪಾರಿ ನೆಲೆಗಳು ಇಲ್ಲಿಯೂ ಸಹಾ ಉಪ ಆಡಳಿತ ವಿಭಾಗಗಳೇ ವ್ಯಾಪಾರ ಕೇಂದ್ರಗಳಾಗವೆ. ಹಾಗೂ 90ಕ್ಕೂ ಅಧಿಕ ನೀರಿನ ಮೂಲಗಳಿರುವ ಹಳ್ಳ, ಕೆರೆ, ನದಿ ಬಾವಿಗಳು ಕಂಡುಬಂದಿವೆ. ಇಲ್ಲಿ ಪ್ರಮುಖವಾಗಿ ಕಾಲದಿಂದ ಕಾಲಕ್ಕೆ ನೆಲೆಗಳು ಜಾಸ್ತಿಯಾಗಿರುವುದು ಕಂಡುಬರುತ್ತದೆ. ಸಾಂಸ್ಕೃತಿಕವಾಗಿ ವೇಶಾವೃತ್ತಿ, ಸತಿಸಹಗಮನ ಪದ್ಧತಿ, ಜಾತಿ ಪದ್ಧತಿಯ ಎಂಬ ಅನಿಷ್ಠ ಪದ್ಧತಿ ಹಾಗೂ ಆಚರಣೆಗಳು ಉನ್ನತ ಸ್ತಾನದಲ್ಲಿದ್ದವು. ಇಲ್ಲಿ ಶೈವ ಹಾಗೂ ವೈಷ್ಣವ ಧರ್ಮಗಳ ಮಧ್ಯೆ ತಿಕ್ಕಾಟ ಆರಂಭವಾಯಿತು. ಆದರೆ ಹರಿಹರದಲ್ಲಿ ಶೈವ ಹಾಗೂ ವೈಷ್ಣವ ಧರ್ಮದ ಆಚರಣೆಯ ಹರಿಹರೇಶ್ವರ ದೇವಾಲಯದ

ನಿರ್ಮಾಣ ಹಾಗೂ ಪೂಜಾ ಪದ್ಧತಿ ವಿಶೇಷವಾಗಿದೆ. ಇಲ್ಲಿ ಜಾತಿ ಹಾಗೂ ಧರ್ಮದ ಆಧಾರದ ಮೇಲೆ ದೇವಾಲಯಗಳು ನಿರ್ಮಾಣವಾಗಿರುವುದು ಕಂಡುಬರುತ್ತದೆ.

4. ವಿಜಯನಗರ ಅರಸರ ಅಧ್ಯಯನದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಭೂಗೋಳದಲ್ಲಿ ವಿಶೇಷವಾಗಿ ಪ್ರಾದೇಶಿಕ ಆಡಳಿತ ವಿಭಾಗಗಳು ರಚನೆಯಾಗಿರುವುದು ಕಂಡುಬರುತ್ತದೆ. ಆಡಳಿತ ವಿಭಾಗಗಳಲ್ಲಿ ಎರಡು ದೇಶಗಳು, ಎರಡು ರಾಜ್ಯಗಳು, ಎರಡು ಚಾವಡಿಗಳು, ನಾಲ್ಕು ವೇಂಠೆಗಳು, ಮೂರು ವಳಿತಗಳು, ಹತ್ತು ನಾಡುಗಳು, ಇಪ್ಪತ್ತಮೂರು ಸೀಮೆಗಳು, ಎರಡು ಮಾಗಣಿಗಳು, ಇಪ್ಪತ್ತೊಂದು ಸ್ಥಳಗಳು, ಎರಡು ಪಟ್ಟಣಗಳು ಸಹ ಕಂಡುಬಂದಿವೆ. ಇಲ್ಲಿ ಒಟ್ಟಾರೆಯಾಗಿ 214 ನೆಲೆಗಳು, 54 ವ್ಯಾಪಾರ ಕೇಂದ್ರಗಳು, 100ಕ್ಕೂ ಅಧಿಕ ಸಾಂಸ್ಕೃತಿಕ ಕೇಂದ್ರಗಳು ಹಾಗೂ 46 ನೀರಿನ ಮೂಲಗಳು ಕಾಣಬಹುದು. ಇವರ ಕಾಲದಲ್ಲಿ ವಿದೇಶಿ ವ್ಯಾಪಾರ ಪ್ರಮುಖವಾಗಿತ್ತು. ವೇಶ್ಯಾವೃತಿಯು ರಾಜ ಮಾನ್ಯತೆಯನ್ನು ಪಡೆದಿತ್ತು. ಸತಿಸಹಗಮನ ಪದ್ಧತಿಯು ಆಚರಣೆಯಲ್ಲಿರುವುದು ತಿಳಿದುಬರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ವೈಷ್ಣವ ದೇವಾಲಯಗಳ ನಿರ್ಮಾಣ ಹಾಗೂ ವಿಶೇಷವಾಗಿ ದೇವಾಲಯಗಳ ಗೋಪುರಗಳ ನಿರ್ಮಾಣ ಹಾಗೂ ದಾನದತ್ತಿಗಳನ್ನು ನೀಡಿರುವುದು ಕಂಡುಬರುತ್ತದೆ.

5. ಒಂಬತ್ತು ಪಾಳೆಯಗಾರರು ಜಿಲ್ಲೆಯಲ್ಲಿ ಪ್ರಮುಖವಾಗಿ ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ಇವರ ಆಡಳಿತದಲ್ಲಿ ವಿಶೇಷವಾಗಿ ಪ್ರಾದೇಶಿಕ ಆಡಳಿತ ವಿಭಾಗಗಳು ಕಾಣಬಹುದಾಗಿದೆ. ಪ್ರಮುಖವಾಗಿ ಎರಡು ರಾಜ್ಯಗಳು, ಎರಡು ವೆಂಠೆಗಳು, ಎರಡು ವಳಿತಗಳು, ಐದು ನಾಡುಗಳು, 19 ಸೀಮೆಗಳು, ಎರಡು ಮಾಗಣಿಗಳು, 10 ಸ್ಥಳಗಳು ಹಾಗೂ ಪಾಳೆಯಗಾರರ ಕಾಲದಲ್ಲಿ ಜಿಲ್ಲೆಯಲ್ಲಿ ವಿಶೇಷವಾಗಿ ಮೊದಲ ಬಾರಿ ಹೋಬಳಿ ಆಡಳಿತ ವಿಭಾಗ ಕಂಡುಬಂದಿದ್ದು, ಇಂದಿಗೂ ನಾವು ಹೋಬಳಿ ಆಡಳಿತವನ್ನು ಕಾಣಬಹುದಾಗಿದೆ. ಒಟ್ಟಾರೆಯಾಗಿ 258 ನೆಲೆಗಳು, 65 ವ್ಯಾಪಾರ ಕೇಂದ್ರಗಳು, 202 ಸಾಂಸ್ಕೃತಿಕ ಕೇಂದ್ರಗಳು ಹಾಗೂ 44 ನೀರಿನ ಮೂಲಗಳು ಕಂಡುಬಂದಿರುವುದು ವಿಶೇಷವಾಗಿದೆ. ಇವರು ದಾನ ಧರ್ಮಗಳನ್ನು ನೀಡುವಾಗ ಒಂದು ಸೀಮೆ, ವಳಿತ ಈ ರೀತಿ ಒಂದು ಆಡಳಿತ ವಿಭಾಗವನ್ನು ಕೊಡದೆ ಒಂದು ಹಳ್ಳಿ ಅಥವಾ ನಿರ್ಧಿಷ್ಠ ಭೂಮಿಯನ್ನು ಕೊಟ್ಟಿರುವುದು, ಭೋಗ್ಯಕ್ಕೆ ಕೊಟ್ಟಿರುವುದು ಹಾಗೂ ಅವುಗಳನ್ನು ಕೆಲವೇ ವರ್ಷಗಳಲ್ಲಿ ವಾಪಸ್ಸು ಪಡೆದು ಇನ್ನೊಬ್ಬರಿಗೆ ಕೊಟ್ಟಿರುವುದು ಕಂಡುಬರುತ್ತದೆ. ಅಂದರೆ ಇವರು ಸಣ್ಣ ಸಣ್ಣ ಪಾಳೆಯಪಟ್ಟುಗಳನ್ನು ಹೊಂದಿದ್ದರಿಂದ ದಾನಧರ್ಮ ಮಾಡುವುದು ಕಷ್ಟಸಾಧ್ಯವಾಯಿತು. ಹಾಗೂ ಹಲವಾರು ಪಾಳೆಯಗಾರರು ಒಂದೇ ಪ್ರಾಂತ್ಯದಲ್ಲಿ ಆಳ್ವಿಕೆ ಮಾಡುತ್ತಿದ್ದರಿಂದ ಪರಸ್ಪರ ಘರ್ಷಣೆಯಾಗುತ್ತಿತ್ತು. ಈ ಸಂದರ್ಭದಲ್ಲಿ ಮೈಸೂರು ಅರಸರ ಪ್ರಾಬಲ್ಯ, ಹೈದರ್ ಟಿಪ್ಪು ಅವರ ಹೊರಾಟ ಹಾಗೂ ಬ್ರಿಟಿಷರ ಪ್ರಾಬಲ್ಯದಿಂದ ಪಾಳೆಯಗಾರರ ವಂಶಗಳು ಮೂಲೆಗುಂಪಾದವು ಎನ್ನಬಹುದು.

ಸಂಶೋಧನ ಚಟುವಟಿಕೆಗಳು.

ಮಂಡಿಸಿದ ಪ್ರಂಬಂಧಗಳು:

1. 'ಲಕ್ಷ್ಮೀಸಾಗರ ಗ್ರಾಮದ ರಾಷ್ಟ್ರಕೂಟರ ಕಾಲದ ಸಿಡೆತಲೆ ವೀರಗಲ್ಲು', ರಾಷ್ಟ್ರೀಯ ವಿಚಾರ ಸಂಕೀರಣ, ಕರ್ನಾಟಕ ಇತಿಹಾಸ ಅಕಾಡೆಮಿ, ದಿನಾಂಕ: 23 /10/24 ಧಾರವಾಡ. 2016.
2. 'ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ಆಡಳಿತ ಕುರಿತು ಒಂದು ಅವಲೋಕನ', ರಾಷ್ಟ್ರೀಯ

ವಿಚಾರ ಸಂಕೀರಣ. ಹೊಯ್ಸಳರ ಕಾಲಘಟ್ಟದ ಇತಿಹಾಸದ ವಿವಿಧ ಆಯಾಮಗಳು. ಸಂಶೋಧನಾ ಲೇಖನಗಳ ಸಂಕಲನ ದಿನಾಂಕ: 28/01/2017, ಮೂಡಿಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

3. 'ನೊಳಂಬರ ಆಳ್ವಿಕೆ', ರಾಷ್ಟ್ರೀಯ ವಿಚಾರ ಸಂಕೀರಣ. ದಾವಣಗೆರೆ. ದಿ:05/10/2018 ಹಾಗೂ ದಿನಾಂಕ: 06/10/2018. ದಾವಣಗೆರೆ.

ಪ್ರಕಟಣೆಗಳು:

1. ಆರ್.ಶೇಜೇಶ್ವರ., 'ಲಕ್ಷ್ಮೀಸಾಗರ ಗ್ರಾಮದ ರಾಷ್ಟ್ರಕೂಟರ ಕಾಲದ ಸಿಡಿತಲೆ ವೀರಗಲ್ಲು', ಇತಿಹಾಸ ದರ್ಶನ, ಸಂಪುಟ.32. (ಬೆಂಗಳೂರು, 2017), ಐಎಸ್‌ಬಿಎನ್: 978–81–921255–7–2.
2. ಆರ್.ಶೇಜೇಶ್ವರ., 'ಚಿತ್ರದುರ್ಗ ಜಿಲ್ಲೆಯಲ್ಲಿ ಹೊಯ್ಸಳರ ಆಡಳಿತ ಕುರಿತು ಒಂದು ಅವಲೋಕನ– ಹೊಯ್ಸಳರ ಕಾಲಘಟ್ಟದ ಇತಿಹಾಸದ ವಿವಿಧ ಆಯಾಮಗಳು. ಸಂಶೋಧನಾ ಲೇಖನಗಳ ಸಂಕಲನ. (ಚಿಕ್ಕಮಗಳೂರು, 2017). ಐಎಸ್‌ಬಿಎನ್: 978–1–387–43662–0.
3. ಆರ್.ಶೇಜೇಶ್ವರ., 'ನೊಳಂಬರ ಆಳ್ವಿಕೆ', ದಾವಣಗೆರೆ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, (ಬೆಂಗಳೂರು, 2019). ಐಎಸ್‌ಬಿಎನ್–978–81–920681–9–0.
4. ಆರ್.ಶೇಜೇಶ್ವರ., 'ನೊಳಂಬರ ಆಳ್ವಿಕೆ', ನೊಳಂಬ ಸಂಪದ, (ತುಮಕೂರು, 2019), ಪುಟಗಳು.
5. ಆರ್.ಶೇಜೇಶ್ವರ., 'ವಾಸನ ಗ್ರಾಮದ ಅಪ್ರಕಟಿತ ಶಾಸನ' ಶಾಸನ ಅಧ್ಯಯನ, ಸಂಪುಟ–10. ಸಂಚಿಕೆ.11, ಸಂಚಿಕೆ–1, ಜುಲೈ–ಡಿಸೆಂಬರ್.2018. (ಹಂಪಿ, 2020). ಐ.ಎಸ್.ಎಸ್.ಎನ್.2277–40.

ಗ್ರಂಥಸೂಚಿ.

ಪ್ರಾಥಮಿಕ ಆಕರಗಳು:

1. ಬಿ.ಎಲ್.ರೈಸ್ (ಸಂ) ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ–11.
2. ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ – 8.
3. ಮೈಸೂರು ಪುರಾತತ್ವ ಇಲಾಖೆಯ ವರದಿಗಳು–1908ರಿಂದ 1941ರವರೆಗೆ.
4. ಎಂ.ಎಚ್. ಕೃಷ್ಣ, ಎಕ್ಸ್‌ಕವೇಷನ್ ಅಟ್ ಚಂದ್ರವಳ್ಳಿ, ಅರ್ಕಿಯಾಲಾಜಿಕಲ್ ಸರ್ವೆ ಮೈಸೂರು. ಬೆಂಗಳೂರು, 1931.
5. 1940ರ ಮೈಸೂರು ಅರ್ಕಿಯಾಲಾಜಿಕಲ್ ರಿಪೋರ್ಟ್ ಪಾರ್ಟ್–4 "ಎಕ್ಸವೇಷನ್ ಅಟ್ ಚಿತ್ರದುರ್ಗ. ಡಿಸ್ಟ್ರಿಕ್ಟ್ ಬ್ರಹ್ಮಗಿರಿ ಸೈಟ್".
6. ಶಾಸನ ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
7. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್– ಸಂಪುಟಗಳು.
8. ಎಂ.ಎ.ಆರ್. ಎ ಸ್ಟಡಿ ಬೈ ಶೆಟ್ಟರ್.ಎಸ್., ಡಿಪಾರ್ಟ್‌ಮೆಂಟ್ ಆಫ್ ಹಿಸ್ಟರಿ ಅಂಡ್ ಆರ್ಕಿಯಾಲಜಿ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಸಂಪುಟಗಳು.3
9. ರಾಷ್ಟ್ರಕೂಟರ ಶಾಸನ ಸಂಪುಟಗಳು, ಮೈಸೂರು.
10. ಕಲ್ಯಾಣ ಚಾಲುಕ್ಯರ ಶಾಸನ, ಸಂಪುಟ. ಮೈಸೂರು.
11. ಪಾಳೆಯಗಾರರ ಶಾಸನ ಸಂಪುಟಗಳು, ಮೈಸೂರು.

ಅನುಷಂಗಿಕ/ಸಾಹಿತಿಕ ಆಕರಗಳು

1. ಸುಂದರ.ಅ. '*ಪ್ರಾಚ್ಯವಸ್ತು ಸಂಶೋಧನೆ*', (ಧಾರವಾಡ ವಿ.ವಿ., 1972).
2. ಡಾ. ಎಸ್.ಜಿ. ರಾಮದಾಸ ರೆಡ್ಡಿ. ಲೋಕಪಾವನಿ ರೇಣುಕಾಶ್ರೀ ಪ್ರಕಾಶನ. ಮೈಸೂರು. 2012.
3. ಡಾ. ಶೇಷಾದ್ರಿ ಎಮ್., '*ಕರ್ನಾಟಕ ಪ್ರಾಕ್ಚಾತ್ರಿಕದ ಸಂಸ್ಕೃತಿಗಳು*', ಇನ್, ಕರ್ನಾಟಕ ಪರಂಪರೆ. ಸಂ.1, ಮೈಸೂರು.
4. ಕೆ.ಬಿ. ಶಿವತಾರಕ್. ಕರ್ನಾಟಕದ ಪುರಾತತ್ವ ನೆಲೆಗಳು. ಪ್ರಸಾರಾಂಗ.ಕನ್ನಡ ವಿಶ್ವವಿದ್ಯಾಲಯ. ಹಂಪಿ.2001.
5. ಇತಿಹಾಸ ಮತ್ತು ಪುರಾತತ್ವ ಕನ್ನಡ ವಿಷಯ ವಿಶ್ವಕೋಶ, ಕುವೆಂಪು ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2009.
6. ಡಾ. ಎಸ್.ಜಿ. ರಾಮದಾಸ ರೆಡ್ಡಿ, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ, ಕನ್ನಡ ಸಾಹಿತ್ಯ ಪರಿಷತ್. ಬೆಂಗಳೂರು. 2009.
7. ಡಾ.ಎಸ್.ವೈ.ಸೋಮಶೇಖರ್. (ಸಂ). ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-3. ಬ್ರಹ್ಮಗಿರಿ,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ. 2010.
8. ಸೂರ್ಯನಾಥ್ ಕಾಮತ್- ಕರ್ನಾಟಕ ರಾಜ್ಯ ಗ್ಯಾಜಿಟಿಯರ್. ಕೊಡಗು ಜಿಲ್ಲೆ(ಪರಿಷ್ಕೃತ) ಸಂಪುಟ-1.
9. ಸುಂದರ.ಅ. ಚಿತ್ರದುರ್ಗ ಪರಿಸರದ ಇತ್ತಿಚಿನ ಪುರಾತತ್ವ ಶೋಧನೆಗಳು. ಮಾ.ಭಾ.ಸಂ2:1
10. ಡಾ. ಎಸ್.ಜಿ. ರಾಮದಾಸ ರೆಡ್ಡಿ. ಕ್ಷೇತ್ರಕಾರ್ಯ ರೇಣುಕಾಶ್ರೀ ಪ್ರಕಾಶನ. ಮೈಸೂರು.2011.
11. ಲಕ್ಷ್ಮಣ್‌ತೆಲಗಾವಿ, ಮೌರ್ಯ ಮತ್ತು ಶಾತವಾಹನಯುಗ, 2004.
12. ತಿಪ್ಪೇಸ್ವಾಮಿ ಎಸ್, 2004, ರಕ್ಷಣಾ ವಾಸ್ತುಶಿಲ್ಪಿ, ಚಿತ್ರದುರ್ಗ ಜಿಲ್ಲೆ (ಅಪ್ರಕಟಿತ ಪಿ.ಹೆಚ್.ಡಿ.ಪ್ರಬಂಧ)
13. ದಿವಾಕರ್ ಆರ್, ಕರ್ನಾಟಕ ಪರಂಪರೆ ಸಂ-1.
14. ಸುಂದರ. ಅ.(ಸಂ)1997, ಕ.ಚ.ಸಂ-1.
15. ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು ಡಾ.ಚನ್ನಬಸವಯ್ಯ ಹಿರೇಮಠ, ಕನ್ನಡ ವಿಶ್ವವಿದ್ಯಾಲಯ ಹಂಪಿ. 2014.
16. ಡಾ.ಎಂ.ಚಿದಾನಂದಮೂರ್ತಿ ಹೊಸತು ಹೊಸತು. ಬೆಂಗಳೂರು.
17. ಹೆಚ್.ಖಂಡೊಬರಾವ್. ನಾಣ್ಯ ಕರ್ನಾಟಕ, ಮಗರ್ ಪಬ್ಲಿಕೇಷನ್ಸ್, ಗಾಂಧಿನಗರ. ಶಿವಮೊಗ್ಗ. 2002.
18. ಡಾ.ಎಚ್. ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಪಿ.ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ. ಮೈಸೂರು. 2105.
19. ಬಿ.ರಾಜಶೇಖರಪ್ಪ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಸಂಶೋಧನೆಯ ಸವಾಲುಗಳು, ಇತಿಹಾಸ ಕಥನ, ಚಿತ್ರದುರ್ಗ ಪರಿಸರ ಇತಿಹಾಸ ಕುರಿತ ಸಂಶೋಧನ ಪ್ರಭಂದಗಳು.
20. ಪುಟ್ಟಣ್ಣ ಎಂ.ಎಸ್., ಚಿತ್ರದುರ್ಗದ ಪಾಳೆಯಗಾರರು, ಕಾವ್ಯಾಲಯ ಪ್ರಕಾಶನ, ಮೈಸೂರು, 1997.

21. ಚಿದಾನಂದ ಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್ ಹೌಸ್. ಬೆಂಗಳೂರು, 2002.
22. ಚನ್ನಬಸಪ್ಪ.ಎಸ್. ಪಾಟೀಲ., ಕರ್ನಾಟಕದ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1999.
23. ಚೆನ್ನಕ್ಕ ಎಲಿಗಾರ., ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1990.
24. ಸಿ.ಪಿ.ಕೆ., ಭಾರತೀಯ ಶಾಸನಶಾಸ್ತ್ರ ಪರಿಚಯ, ಲಕ್ಷ್ಮೀ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್, ಮೈಸೂರು, 2001.
25. ದಿವಾಕರ್.ಆರ್.ಆರ್., (ಸಂ), ಕರ್ನಾಟಕದ ಪರಂಪರೆ, ಸಂ–1, ಮೈಸೂರು ರಾಜ್ಯ ಸರಕಾರ, 1970.
26. ದೀಕ್ಷಿತ್.ಜಿ.ಎಸ್., ಕುಪ್ಪುಸ್ವಾಮಿ.ಜಿ.ಆರ್., ಮೋಹನ್.ಎಸ್.ಕೆ., ಕರ್ನಾಟಕದಲ್ಲಿ ಕೆರೆ ನೀರಾವರಿ(ಅನು), ನೀಲತ್ತಹಳ್ಳಿ ಕಸ್ತೂರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. 2000.
27. ಗೋಪಾಲ್.ಬಾ.ರಾ., ಕರ್ನಾಟಕದಲ್ಲಿ ನವಶಿಲಾಯುಗ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1971.
28. ಕಲಬುರ್ಗಿ ಎಂ.ಎಂ., ಸಮಾಧಿ ಬಲಿದಾನ ವೀರ ಮರಣ, ಐ.ಬಿ.ಎಚ್.ಪ್ರಕಾಶನ, ಗಾಂಧಿ ನಗರ, ಬೆಂಗಳೂರು, 1980.
29. ಲಕ್ಷ್ಮಣ್ ತೆಲಗಾವಿ. (ಸಂ), ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, 2008.
30. ಲಕ್ಷ್ಮಣ್ ತೆಲಗಾವಿ. ಎಪ್ಪತ್ತೇಳು ಪಾಳೆಯಗಾರರು, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, 2010.
31. ಲಕ್ಷ್ಮಣ್ ತೆಲಗಾವಿ. (ಸಂ) ವಿಜಯನಗರ ಕಾಲದ ರಾಮಾನುಜಕೂಟಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2009.
32. ಲಕ್ಷ್ಮಣ್ ತೆಲಗಾವಿ. (ಸಂ), ಹರಿತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, 1987.
33. ನಾಗೇಗೌಡ.ಎಚ್.ಎಲ್., (ಸಂ), ಪ್ರವಾಸಿ ಕಂಡ ಇಂಡಿಯಾ ಸಂಪುಟಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1998.
34. ನಾಗರಾಜಯ್ಯ.ಹಂ.ಪ., ಯಾಪನೀಯ ಸಂಘ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1999.
35. ಪರಮಶಿವಮೂರ್ತಿ.ಡಿ.ವಿ., ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 1999.
36. ಪಂಚಮುಖಿ.ಆರ್.ಎಸ್., ಕರ್ನಾಟಕದ ಇತಿಹಾಸ–ಸಂ–1, ಕೆ.ಎಚ್.ಆರ್.ಎಸ್, ಧಾರವಾಡ, 2008.
37. ರಾಜರಾಮ ಹೆಗಡೆ., ಗತ–ಕಥನ, ಆನಂದಕಂದ ಗ್ರಂಥಮಾಲೆ, ಮಲ್ಲಾಡಿಹಳ್ಳಿ, 2005.
38. ರಾಜರಾಮ ಹೆಗಡೆ., ಮತ್ತು ಅಶೋಕ್ ಶೆಟ್ಟರ್.,(ಸಂ), ಮಲೆ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2001.

39. ರಾಜರಾಮ ಹೆಗಡೆ., (ಸಂ), ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2002.
40. ರಾಬರ್ಟ್ ಸಿವೆಲ್., (ಅನು)ಸದಾನಂದ ಕನವಳ್ಳಿ, ಮರೆತುಹೋದ ಮಹಾ ಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2005.
41. ಶಿವಣ್ಣ., ಮಧ್ಯಕಾಲೀನ ಭಾರತದ ಆರ್ಥಿಕ ಇತಿಹಾಸ(1200-1750), ಇತಿಹಾಸ ಲೋಕ ಮೈಸೂರು, 1999.
42. ಶ್ರೀನಿವಾಸ ಹಾವನೂರು.,(ಸಂ), ಮಧ್ಯಕಾಲೀನ ಕರ್ನಾಟಕ, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು, 2008.
43. ಡಾ. ಶ್ರೀಕಂಠಶಾಸ್ತ್ರೀ ಎಸ್., ಪುರಾತತ್ವ ಶೋಧನೆ, ಸಾಮಾನ್ಯ ಲಕ್ಷಣ, ವಿಶ್ವವಿದ್ಯಾನಿಲಯ ಮುದ್ರಣಾಲಯ. ಮೈಸೂರು, 1960.
44. ಶ್ರೀನಿವಾಸ ಪಾಡಿಗಾರ., ಪುರಾತತ್ವ ಶಾಸ್ತ್ರ ಪರಿಚಯ, ಗಾಯತ್ರಿ ಪ್ರಕಾಶನ, ಧಾರವಾಡ, 1987.
45. ಶ್ರೀಕಂಠಯ್ಯ/ಸಾಲೆತ್ತೊರೆ., ಕನ್ನಡನಾಡಿನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1941.
46. ಶ್ರೀಕಂಠಯ್ಯ.ಕೆ., ವಿಜಯನಗರ ಕಾಲದ ಕನ್ನಡ ಸಾಹಿತ್ಯದಲ್ಲಿ ಜನಜೀವನ ಚಿತ್ರ, ಮೈಸೂರು, 1983.
47. ಶೇಠೆ.ಎನ್., ಕರ್ನಾಟಕದಲ್ಲಿ ಸತಿಪದ್ಧತಿ, ವೀರಶೈವ ಅಧ್ಯಯನ ಅಕಾಡೆಮಿ, ನಾಗನುರು ರುದ್ರಾಕ್ಷಿ ಮಠ, ಬೆಳಗಾವಿ, 1991.
48. ಶೇಷಶಾಸ್ತ್ರಿ.ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1982.
49. ಶಿವರುದ್ರಸ್ವಾಮಿ.ಎಸ್.ಎನ್., ಬಯಕಾರ ರಾಮಪ್ಪ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2005.
50. ಸಂತೇಬೆನ್ನೂರು ಸುಮತೀಂದ್ರ ನಾಡಿಗ್., ಸಂತೇಬೆನ್ನೂರು ನಾಯಕರು, ಕರ್ನಾಟಕ ರಾಜ್ಯ ಪತ್ರಗಾರ ನಿರ್ದೇಶನಾಲಯ, ಬೆಂಗಳೂರು, 2008.
51. ಸಮತೇನಹಳ್ಳಿ ರಾಮರಾಯ., (ಅನು), ಟಿಪ್ಪುಸುಲ್ತಾನನ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾನಿಲಯ, ಮೈಸೂರು, 1988.
52. ಸುಂದರ.ಅ., ಕರ್ನಾಟಕ ಪ್ರಾಗಿತಿಹಾಸದ ಕಲೆ, ಕರ್ನಾಟಕ ಲಲಿತಾಕಲಾ ಅಕಾಡೆಮಿ, ಬೆಂಗಳೂರು, 1994.
53. ಸುಂದರ.ಅ., ಕರ್ನಾಟಕ ಪ್ರಾಗೈತಿಹಾಸ ಅಥವಾ ಇತಿಹಾಸ ಪೂರ್ವ ಕರ್ನಾಟಕ, ಇಂಡಿಯಾ ಬುಕ್‌ಹೌಸ್ ಪ್ರಕಾಶನ, ಗಾಂಧಿನಗರ, ಬೆಂಗಳೂರು. 1902.
54. ಸುಂದರ.ಆ.,ಪ್ರಾಚ್ಯವಸ್ತು ಸಂಶೋಧನೆ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1972.
55. ವಸು.ಎಂ.ವಿ., (ಸಂ), ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2001.
56. ವಾಸುದೇವನ್.ಸಿ.ಎಸ್., ಹಂಪಿ ಪರಿಸರದ ಕೆರೆಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2001.

57. ವೆಂಕಟರತ್ನಂ.ಎಂ.ವಿ., ವಿಜಯನಗರ ಸಾಮ್ರಾಜ್ಯದಲ್ಲಿ ಸ್ಥಳೀಯ ಸರಕಾರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974.

ಆಂಗ್ಲಭಾಷಾ ಗ್ರಂಥಗಳು:

1. ಚೊಪ್ರಾ ಗೀರಿಶ್. ಎನ್ಸೈಕ್ಲೊಪಿಡಿಕ್ ಡಿಕ್ಷನರಿ ಆಪ್ ಜಿಯಾಗ್ರಫಿ. ನ್ಯೂ ದೆಹಲಿ.2006.
2. ಶ್ರೀನಿವಾಸಮೂರ್ತಿ ಹೆಚ್.ವಿ. ರಾಮಕೃಷ್ಣನ್ ಆರ್., 1978. ಎ ಹಿಸ್ಟರಿ ಆಫ್ ಕರ್ನಾಟಕ.
3. ನಾರ್ಟನ್ ವಿಲಿಯಮ್ಸ್, ಹಿಸ್ಟೋರಿಕಲ್ ಅನಾಲಿಸಿಸ್ ಇನ್ ಜಿಯಾಗ್ರಫಿ, ಲಾಂಗ್ಮನ್, ನ್ಯೂಯಾರ್ಕ್. 1984.
4. ಸಂಕಾಲಿಯಾ. ಹೆಚ್.ಡಿ., '*ಪ್ರೀ ಹಿಸ್ಟರಿ ಆಫ್ ಇಂಡಿಯಾ* (ನವದೆಹಲಿ, 1977).
5. ಸಾಂಕಾಲಿಯಾ ಹೆಚ್.ಡಿ.–1974 ಪ್ರೀ ಅಂಡ್ ಪ್ರೋಟೋ ಹಿಸ್ಟರಿ ಆಫ್ ಇಂಡಿಯಾ ಅಂಡ್ ಪಾಕಿಸ್ತಾನ.
6. ಕೆ. ಪದ್ದಯ್ಯ. ಅನಿಸೆಂಟ್ ಆಂಧ್ರ ಹಿಸ್ಟರಿ ಅಂಡ್ ಅರ್ಕಿಯಾಲಜಿ. ಇನ್ ಹಿಸ್ಟರಿ ಕಾಂಗ್ರೆಸ್, ಅನಂತಪುರ, 1995.
7. ಜರ್ನಲ್ ಆಪ್ ಕರ್ನಾಟಕ ಸ್ಟಡೀಸ್, 4–2 5–1, ಏಪ್ರಿಲ್–2008.
8. ಘೂಟ್ ಬಿ.ಆರ್., ಇಂಡಿಯನ್ ಪ್ರಿ ಹಿಸ್ಟರಿ ಅಂಡ್ ಪ್ರೋಟೋ ಹಿಸ್ಟಾರಿಕ್ ಆಟಿಕ್ವಿಟಿಸ್.
9. ಎಂ.ಎಸ್. ನಾಗರಾಜರಾವ್, ಪ್ರೋಗ್ರೇಸ್ ಆಫ್ ಆರ್ಕಿಯಾಲಜಿ ಇನ್ ಕರ್ನಾಟಕ, ಮೈಸೂರು, 2010.
10. ರಾಮಣ್ಣ. ಹೆಚ್. ಎಸ್.–ಮೆಗಲಿಥ್ ಆಪ್ ಸೌತ್ ಇಂಡಿಯಾ ಅಂಡ್ ಸೌತ್ ಈಸ್ಟ್ ಏಶಿಯಾ ಎ ಕಂಪೇರೇಟಿವ್ ಸ್ಟಡಿ. 1983.
11. ಶಾಂತರಾಂ ಬಾಲಚಂದ್ರದೇವ್– ಪ್ರಾಬ್ಲಮ್ಸ್ ಆಫ್ ಸೌತ್ ಇಂಡಿಯನ್ ಮೆಗಲಿಥ್. 1973.
12. ಸುಂದರ.ಅ. ಅರ್ಲಿ ಛೇಂಬರ್ಸ್ ಟೂಲ್ಸ್ ಆಫ್ ಸೌತ್ ಇಂಡಿಯಾ. 1975.
13. ಬಾಂಬಿಗ್ಟನ್. ಜೆ. ಡಿಸ್ಕೀಡೆಶನ್ ಆಪ್ ದಿ ಪಾಂಡೋ ಕೋಲಿಸ್ ಇನ್ ಮಲಬಾರಿ ಟ್ರಾನ್ಸನ್ಸ್ ಆಫ್ ಲಿಟರರಿ ಸೊಸೈಟಿ ಆಫ್ ಬಾಂಬೆ.ವ್ಯಾಲುಂ–3. ಪುಟ–324–330.
14. ಮೆಡೋಸ್ ಟೇಲರ್– ಮೆಗಲಿಥಿಕ್ ಟೂಂಬ್ಸ್ ಅಂಡ್ ಅದರ್ ಏನ್ಸಿಯಂಟ್ ರಿಮೈನ್ಸ್
15. ಇಂಡಿಯನ್ ಆರ್ಕಿಯಾಲಜಿ–ಎ ರಿವ್ಯೂ. 1965–66.
16. ಕೆ.ಕೆ. ಸುಬ್ಬಯ್ಯ ಆರ್ಕಿಯಾಲಜಿ ಆಫ್ ಕೂರ್ಗ್.ಗೀತಾ ಬುಕ್ ಹೌಸ್. ಮೈಸೂರು. 1978
17. ದೇವರಾಜ್. ಡಿ.ವಿ. ಗೋಪಾಲ್.ಬಿ.ಆರ್. ಎಡಿಟೆಡ್ ಶೇಷಚಂದ್ರಿಕ–1995 ಪುಟ–66.
18. ಶಾಂತರಾಂ ಬಾಲಚಂದ್ರದೇವ್– ಪ್ರಾಬ್ಲಮ್ಸ್ ಆಪ್ ಸೌತ್ ಇಂಡಿಯನ್ ಮೆಗಲಿಥ್ಸ್ 1973, ಪುಟ–27.
19. ಶೇಷಾದ್ರಿ ಎಂ–ಎಕ್ಸಕವೇಷನ್ ಆಟ್, ಟಿ. ನರಸೀಪುರ. 1971.
20. ಗುರುರಾಜರಾವ್.ಬಿ.ಕೆ.– ಮೆಗಲಿಥಿಕ್ ಕಲ್ಚರ್ ಇನ್ ಸೌತ್ ಇಂಡಿಯ. 1972.
21. ಶೆಟ್ಟರ್. ಎಸ್. ರವಿಕೋರಿ ಶೇಟ್ಟರ್– ಎಡಿಟೆಡ್, ಆರ್ಕಿಯಾಲಜಿ ಅಂಡ್ ಇಂಟರ್ಯಾಕ್ಟಿವ್ ಡಿಸಿಪ್ಲಿನ್, ಐ.ಸಿ.ಎಚ್.ಆರ್.2002.
22. ಶಶಿಶೇಖರನ್.ಬಿ. ಐರನ್ ಇಂಡಸ್ಟ್ರಿನ್ ಅಂಡ್ ಮೆಟಲಾರ್ಜಿ ಎ ಸ್ಟಡಿ ಆಪ್ ಏನ್ಸಿಯಂಟ್ ಟಿಕ್ನಾಲಜಿ. 2004.

23. ಎಂ.ಎಸ್. ನಾಗರಾಜ್‌ರಾವ್. ಪ್ರೋಗ್ರೆಸ್ ಆಫ್ ಆರ್ಕಿಯಾಲಜಿ ಅಂಡ್ ಮ್ಯೂಸಿಯಂಸ್ ಇನ್ ಕರ್ನಾಟಕ.ಮೈಸೂರು–2010.
24. ಸುಂದರ.ಎ. ಎ.ನಿಯೋಲಿಥಿಕ್ ಬರಿಯಲ್ ಇನ್ ತೆರೆದಾಳ ಪುರಾತತ್ವ. ಸಂಪುಟ–4.

ಲೇಖನಗಳು:

1. ಡಾ. ಎಂ.ಎಸ್. ಕೃಷ್ಣಮೂರ್ತಿ.ಕರ್ನಾಟಕದಲ್ಲಿ ಪುರಾತತ್ವ ನೆಲೆಗಳು. ಇನ್ ಇತಿಹಾಸ ದರ್ಪಣ. ವಿಶೇಷ ಸಂಚಿಕೆ.ಜನವರಿ–ಜೂನ್–2012.
2. ಕೆ.ಬಿ. ಶಿವತಾರಕ. ಚಿತ್ರದುರ್ಗದ ಪ್ರಾಗಿತಿಹಾಸ. ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ. ಸಂ.ಆರ್ ಗೋಪಾಲ್. ಹೊಸಪೇಟೆ. 2005.
3. ಡಾ. ಎಸ್. ನಾಗರಾಜು ಕರ್ನಾಟಕದ ಆದಿ ಚಾರಿತ್ರಿಕ. ಇನ್ ಇತಿಹಾಸ ದರ್ಪಣ. ವಿಶೇಷ ಸಂಚಿಕೆ. ಜನವರಿ–ಜೂನ್–2012.
   ಡಾ. ಎನ್. ಎಸ್. ರಂಗರಾಜ್. ಕರ್ನಾಟಕ ಬೃಹತ್‌ಶಿಲಾಸಂಸ್ಕೃತಿ–ಒಂದು ಮರು ಚಿಂತನೆ ಇನ್ ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ ಪ್ರಸಾರಾಂಗ. ಹಂಪಿ.2007.
4. ಮದುಂದಾರ್, ರಾಯಚೌಧರಿ, ಕಾಲೀಕಿಂಕರದತ್ತ. ಭಾರತದ ಪ್ರೌಢ ಇತಿಹಾಸ.2003.
5. ಡಾ.ಎಂ.ವಿ.ಶ್ರೀನಿವಾಸ್, ಚಿತ್ರದುರ್ಗ ಜಿಲ್ಲೆಯಲ್ಲಿ ಮೌರ್ಯರ ಆಳ್ವಿಕೆ. ಚಂದ್ರವಳ್ಳಿ, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಕುರಿತ ಲೇಖನಗಳು, ಸಂ, ಡಾ// ಎಂ.ವಿ. ಶ್ರೀನಿವಾಸ್, ಲ.ತೆಲಗಾವಿ. 1976.
6. ಚಿತ್ರದುರ್ಗ ಜಿಲ್ಲೆಯಲ್ಲಿ ಭೌದ್ಧಧರ್ಮದ ಕುರುಹುಗಳು, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು ಸಂ.ಲಕ್ಷ್ಮಣ ತೆಲಗಾವಿ. ಎಂ.ವಿ. ಶ್ರೀನಿವಾಸ್.
7. ಅದವಾನಿ ಅಲೂರು, ಹುಲ್ಲೂರು ಶ್ರೀನಿವಾಸರ ಜೋಯಿಸರ ಐತಿಹಾಸಿಕ ಲೇಖನಗಳು ಸಂ.ಲಕ್ಷ್ಮಣ ತೆಲಗಾವಿ. ಎಂ.ವಿ. ಶ್ರೀನಿವಾಸ್.
8. ಡಾ.ಎ.ವಿ. ನರಸಿಂಹಮೂರ್ತಿ. ಕರ್ನಾಟಕದಲ್ಲಿನಾಣ್ಯಶಾಸ್ತ್ರಧ್ಯಯನ ಇಣುಕು ನೋಟ ಹರತಿಸಿರಿ, 1987.
9. ಕದಂಬರಾಜ್ಯದ ವಿಸ್ತಾರ. ಚಿತ್ರದುರ್ಗ ಇತಿಹಾಸ ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು. ಸಂ.ಲಕ್ಷ್ಮಣ್ ತೆಲಗಾವಿ. ಎಂ.ವಿ. ಶ್ರೀನಿವಾಸ. ಚಿತ್ರದುರ್ಗ. 1976.
10. ಡಾ.ಎ.ವಿ. ನರಸಿಂಹಮೂರ್ತಿ. ಕರ್ನಾಟಕದಲ್ಲಿ ನಾಣ್ಯಶಾಸ್ತ್ರಧ್ಯಯನ ಇಣುಕು ನೋಟ, ಹರತಿಸಿರಿ. 1987.

ಪತ್ರಿಕೆಗಳು, ಇತರ ಗ್ರಂಥ ಸಂಪುಟಗಳು, ನಿಘಂಟುಗಳು:

1. ಇತಿಹಾಸ ದರ್ಶನ ಸಂಪುಟಗಳು, ಕರ್ನಾಟಕ ಇತಿಹಾಸ ಅಕಾಡೆಮಿ(ರಿ), ಬೆಂಗಳೂರು.
2. ಇತಿಹಾಸ ದರ್ಪಣ. ಬೆಂಗಳೂರು
3. ಕರ್ನಾಟಕ ಭಾರತಿ, ಧಾರವಾಡ.

4. ಪ್ರಬುದ್ಧ ಕರ್ನಾಟಕ, ಮೈಸೂರು.
5. ಶಾಸನ ಅಧ್ಯಯನ, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
6. ಜರ್ನಲ್ ಆಫ್ ಕರ್ನಾಟಕ ಯೂನಿವರ್ಸಿಟಿ ಹ್ಯೂಮಾನಿಟೀಸ್ ಅಂಡ್ ಸೋಶಿಯಲ್‌ಸೈನ್ಸ್.
7. ಕ್ವಾರ್ಟರ್ಲಿ ಜರ್ನಲ್ ಆಫ್ ಮಿಥಿಕ್ ಸೊಸೈಟಿ, ಮಿಥಿಕ್ ಸೊಸೈಟಿ,, ಬೆಂಗಳೂರು.
8. ಜರ್ನಲ್ ಆಫ್ ಹಿಸ್ಟೋರಿಕಲ್ ಸ್ಟಡೀಸ್, ಡಿಪಾರ್ಟ್‌ಮೆಂಟ್ ಆಫ್ ಹಿಸ್ಟರಿ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಕರ್ನಾಟಕ ರಾಜ್ಯ ಗೆಜೆಟಿಯರ್–ಚಿತ್ರದುರ್ಗಜಿಲ್ಲೆ ಮತ್ತು ಶಿವಮೊಗ್ಗ ಜಿಲ್ಲೆ.
10. ಕರ್ನಾಟಕ ಚರಿತ್ರೆ ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
11. ಕರ್ನಾಟಕ ರಾಜ್ಯಕೋಶ–4, ಜನಸಮುದಾಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ ಹಂಪಿ.
12. ನಾಯಕ.ಹಾ.ಮಾ.,(ಸಂ), ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, 1972.
13. ಕನ್ನಡ ನಿಘಂಟು ಸಂಪುಟಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
14. ಕಿಟೆಲ್.ರೆ. ಕನ್ನಡ ಇಂಗ್ಲೀಷ್ ಡಿಕ್ಷ್ನರಿ, ಏಷಿಯನ್ ಎಜುಕೇಷನಲ್ ಸರ್ವೀಸ್, ನವದೆಹಲಿ, ಮದ್ರಾಸ್, 2001.

******